ದಾನ ಮಾಡಿರಿ, ಆದರೆ ಅದರಿಂದ ಪ್ರತಿಫಲ ನಿರೀಕ್ಷಿಸಬೇಡಿ. ಅದು ತಾನಾಗಿಯೇ ವಾಪಸ್ ಬರಲಿದೆ
–ಸ್ವಾಮಿ ವಿವೇಕಾನಂದ

# ಬೀದರವಾಣಿ

ಬೀದರ ಜಿಲ್ಲೆಯ ನಿರ್ಭಯ, ನಿಷ್ಪಕ್ಷಪಾತ ಏಕೈಕ ಅಂತರಜಾಲ(Online)

ಸಂಪಾದಕರು:ಸಿದ್ರಾಮಯ್ಯ ಸ್ವಾಮಿ EDITOR:SIDRAMAYYA SWAMY

ಸೋತೆ ಎಂದು ನೀ ಮುಂದಿಟ್ಟ ಹೆಜ್ಜೆ ಹಿಂದಿಡಬೇಡ... ಏಕೆಂದರೆ... ಯಾರಿಗೆ ಗೊತ್ತು ಆ ಹೆಜ್ಜೆ ನಿನ್ನ ಇತಿಹಾಸವನೇ ಸೃಷ್ಟಿ ಮಾಡುವ ಹೆಜ್ಜೆಯಾಗಿರಬಹುದು...

bidarvani.com ಇ-ಪೇಪರ್bidarvani.online bidarvani bidarvani@gmail.com Whatsapp Contact:9148471077

KARKAN/77693/2019 ಸಂಪುಟ:08 ಸಂಚಿಕೆ:210 ದಿನಾಂಕ:20.11.2025 ಗುರುವಾರ ಪುಟ.4 ಬೆಲೆ:02 ರೂ ಮೊ.9945793175


## ಅಧಿಕಾರಿಗಳು ಬೀದಿ ನಾಯಿಗಳ ನಿಯಂತ್ರಣಕ್ಕೆ ಕ್ರಮ ವಹಿಸಿ-ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ

ಬೀದರ.ನ.19:ಬೀದಿ ನಾಯಿಗಳ ಹಾವಳಿ ನಿಯಂತ್ರಣ ಕುರಿತಂತೆ ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ಆದೇಶದ ಹಿನ್ನಲೆಯಲ್ಲಿ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಹಾಗೂ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ತಕ್ಷಣವೇ ಕಾರ್ಯೋನ್ಮುಖರಾಗುವಂತೆ ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಹೇಳಿದರು.



ಇಂದು ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಈ ಕುರಿತು ಜರುಗಿದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು ಸ್ಥಳೀಯ ಸಂಸ್ಥೆಗಳು ಗ್ರಾಮೀಣ ಹಾಗೂ ನಗರ ಪ್ರದೇಶದಲ್ಲಿರುವ ನಾಯಿಗಳ ಸಂಖ್ಯೆ ಹಾಗೂ ಅವುಗಳಿಗೆ ಒದಗಿಸಲಾಗುವ ಆಶ್ರಯ ತಾಣಗಳ ಪಟ್ಟಿಯನ್ನು ನವೆಂಬರ್.21 ರೊಳಗಾಗಿ ಸಲ್ಲಿಸುವಂತೆ ಸೂಚಿಸಿದರು.

ಪಶು ಸಂಗೋಪನೆ ಇಲಾಖೆಯ 2019ರ ಗಣತಿ ಪ್ರಕಾರ ಬೀದರ ಜಿಲ್ಲೆಯಲ್ಲಿ 7 ಸಾವಿರ ಬೀದಿ ನಾಯಿಗಳಿದ್ದು,ಈ ಸಂಖ್ಯೆ ಈಗ ಹೆಚ್ಚಿದೆ.ಸಂಬಂಧಿಸಿದ ಅಧಿಕಾರಿಗಳು ಸದ್ಯ ಇರುವ ನಾಯಿಗಳ ಸಂಖ್ಯೆಯನ್ನು ಒದಗಿಸುವಂತೆ ಜಿಲ್ಲಾಧಿಕಾರಿಗಳು ತಿಳಿಸಿದರು.ಬೀದಿ ನಾಯಿಗಳ ಹಾವಳಿ ನಿಯಂತ್ರಣಕ್ಕೆ ಸಂಬಂಧಿಸಿದ 15 ಇಲಾಖೆಗಳು ತಮಗೆ ನೀಡಲಾಗುವ ಜವಾಬ್ದಾರಿಗಳನ್ನು ಸರಿಯಾಗಿ ನಿಭಾಯಿಸಬೇಕು. ಇದರಲ್ಲಿ ನಗರಸಭೆ ಹಾಗೂ ಗ್ರಾಮ ಪಂಚಾಯತಗಳು ಮುಖ್ಯ ಪಾತ್ರ ವಹಿಸುತ್ತವೆ ಎಂದರು.


ಸಾರ್ವಜನಿಕ ಕಟ್ಟಡಗಳ ಸುತ್ತ ಆವರಣ ಗೋಡೆ ನಿರ್ಮಿಸತಕ್ಕದ್ದು. ಬಸ್ ನಿಲ್ದಾಣದಲ್ಲಿ ಬೀದಿ ನಾಯಿಗಳು ಪ್ರವೇಶಿಸದಂತೆ, ಎಲ್ಲೆಂದರಲ್ಲಿ ತಿನಿಸು ಪದ್ದಾರ್ಥಗಳನ್ನು ಎಸೆಯದಂತೆ ಕ್ರಮಕೈಗೊಳ್ಳಬೇಕು. ಶಿಕ್ಷಣ ಇಲಾಖೆಯು ಮಕ್ಕಳಿಗೆ ನಾಯಿ ಕಡಿತ ಆದಾಗ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕು. ಆರೋಗ್ಯ ಇಲಾಖೆಯ ಎಲ್ಲೆಡೆ ರೇಬಿಸ್ ಲಸಿಕೆ ಹಾಗೂ ಇಮ್ಯುನೋಗ್ಲೋಬಿನ್ ಕಡ್ಡಾಯವಾಗಿ ದಾಸ್ತಾನು ಮಾಡತಕ್ಕದೆಂದು ಜಿಲ್ಲಾಧಿಕಾರಿಗಳು ತಿಳಿಸಿದರು.

ಪಶು ಸಂಗೋಪನೆ ಇಲಾಖೆಯ ಉಪನಿರ್ದೇಶಕರಾದ ಬಿ.ನರಸಪ್ಪ ಮಾತನಾಡಿ,ಎಂಟು ವಾರಗಳಲ್ಲಿ ಎಲ್ಲ ಬೀದಿ ನಾಯಿಗಳ ಸಂತಾನಹರಣ ಶಸ್ತ್ರಚಿಕಿತ್ಸೆ ನಡೆಸಿ ಅವುಗಳನ್ನು ಸೂಕ್ತ ಆಶ್ರಯ ತಾಣಕ್ಕೆ ಸ್ಥಳಾಂತರಿಸಿ ರೇಬಿಸ್ ಲಸಿಕೆಗಳನ್ನು ಹಾಕಬೇಕಾಗುತ್ತದೆ. ಬೀದರ ಮಹಾನಗರ ಪಾಲಿಕೆಯ ಗೋರ್ನಳ್ಳಿ ಗ್ರಾಮದ ಪ್ರದೇಶದಲ್ಲಿ ಆಶ್ರಯತಾಣ ಗುರುತಿಸಲಾಗಿದೆ ಎಂದರು.

ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ಮಹಾನಗರ ಪಾಲಿಕೆ ಆಯುಕ್ತರು, ಲೋಕೋಪಯೋಗಿ ಇಲಾಖೆ ಇಇ, ರಾಷ್ಟ್ರೀಯ ಹೆದ್ದಾರಿ ಯೋಜನಾ ನಿರ್ದೇಶಕರು, ಡಿಡಿಪಿಇ, ಡಿಡಿಪಿಯು, ಪಶುವೈದ್ಯಕೀಯ ಮಹಾವಿದ್ಯಾಲಯದ ರಜಿಸ್ಟ್ರಾರ್, ಬೀದರ ವಿಶ್ವವಿದ್ಯಾಲಯದ ರಜಿಸ್ಟ್ರಾರ್, ಜಿಲ್ಲಾ ಶಸ್ತ್ರಚಿಕಿತ್ಸಕರು, ಆರ್.ಟಿ.ಓ., ಕ್ರೀಡಾ ಇಲಾಖೆ ಉಪನಿರ್ದೇಶಕರು, ಕೆಎಸ್‌ಆರ್‌ಟಿಸಿ ನಿಯಂತ್ರಣಾಧಿಕಾರಿ ಹಾಗೂ ಪಶು ವೈದ್ಯ ಪಶುಪಾಲನಾ ಇಲಾಖೆಯ ಉಪನಿದೇಶಕರು ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ.ಈ ಸಭೆಯಲ್ಲಿ ಮಹಾನಗರ ಪಾಲಿಕೆ ಆಯುಕ್ತ ಮುಕುಲ್ ಜೈನ್ ಸೇರಿದಂತೆ ಇತರೆ ಅಧಿಕಾರಿಗಳು ಉಪಸ್ಥಿತರಿದ್ದರು.

## ಕನಿಷ್ಠ ಮಾಸಿಕ ಇಪಿಎಸ್-95 ಪಿಂಚಣಿಯನ್ನು, ತುಟ್ಟಿಭತ್ಯೆ ಹೆಚ್ಚಿಸಲು ಮನವಿ

ಬೀದರ.ನ.19:EPS-95 ನಿವೃತ್ತ ಉದ್ಯೋಗಿಗಳಿಗೆ Higher Pension ಮಂಜೂರಾತಿ ಪಡೆಯುವ ವಿಷಯದಲ್ಲಿ ರಾಜ್ಯ ಮಟ್ಟದ NAC ಕಾರ್ಯಕಾರಿಣಿಯ ಸೂಚನೆಯ ಮೇರೆಗೆ, ಬೀದರ NAC ಘಟಕವು ಇಂದು ಜಿಲ್ಲಾ ಭವಿಷ್ಯ ನಿಧಿ ಕಚೇರಿಗೆ ಮೆರವಣಿಗೆಯಲ್ಲಿ ತೆರಳಿ ಮನವಿಪತ್ರ, ಸಲ್ಲಿಸಲಾಯಿತು.ಹೊಸ ಬಸ್ ನಿಲ್ದಾಣ ಹತ್ತಿರದ ದೇವಿ ಮಂದಿರದಿಂದ ಪ್ರಾರಂಭವಾಗಿಬಳಿಕ ಮೆರವಣಿಗೆ ಬೀದರ ಜಿಲ್ಲಾ ಭವಿಷ್ಯ ನಿಧಿ ಕಛೇರಿ ತಲುಪಿ ಅಧಿಕಾರಿಗಳಿಗೆ ಮನವಿ ಪತ್ರವನ್ನು ಸಲ್ಲಿಸಲಾಯಿತು.ಜಿಲ್ಲೆಯೆಲ್ಲಾ ನಿವೃತ್ತ EPS-95 NAC ಸದಸ್ಯರನ್ನು ಕಾರ್ಯಕ್ರಮದಲ್ಲಿ ಅನಿವಾರ್ಯವಾಗಿ ಹಾಜರಾಗುವಂತೆ NAC ಬೀದರ ಘಟಕ ಮನವಿ ಮಾಡಿದೆ. Higher Pension ವಿಚಾರವು ಸಾವಿರಾರು ನಿವೃತ್ತ ಉದ್ಯೋಗಿಗಳ ಜೀವನದ ಭದ್ರತೆ ಮತ್ತು ಹಕ್ಕುಗಳಿಗೆ ಸಂಬಂಧಿಸಿದೆ. ದಿಲ್ಲಿ ಪ್ರತಿಭಟನೆ ಕುರಿತ ಚರ್ಚೆ ಕೂಡ ಈ ಸಭೆಯಲ್ಲಿ ಮತ್ತೊಂದು ಪ್ರಮುಖ ವಿಚಾರವಾಗಿರುವ ದಿಲ್ಲಿಯಲ್ಲಿ ದಿನಾಂಕ 03–12–2025 ಮತ್ತು 04–12–2025 ರಂದು ಜರುಗಲಿರುವ ರಾಷ್ಟವ್ಯಾಪಿ ಪ್ರತಿಭಟನೆಯಲ್ಲಿ ಭಾಗವಹಿಸುವ ಬಗ್ಗೆ ಚರ್ಚೆ ನಡೆಯಲಿದೆ.ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ದಿನಾಂಕ: 04.10.2016 ಮತ್ತು 04.11.2022 ರ ತೀರ್ಪುಗಳಲ್ಲಿ ನೀಡಿರುವ ನಿರ್ದೇಶನಗಳ ಅನುಸಾರವಾಗಿ, ಈ ಕೆಳಗಿನ ಕ್ರಮಗಳನ್ನು ತಕ್ಷಣ ಕೈಗೊಳ್ಳಲು ಆಗ್ರಹಿಸಲಾಗಿದೆ: ಕನಿಷ್ಠ ಮಾಸಿಕ ಪಿಂಚಣಿಯನ್ನು 7,500/– + ತುಟ್ಟಿಭತ್ಯೆ (ಆಂ) ಗೆ ಹೆಚ್ಚಿಸುವುದು.ಪಿಂಚಣಿದಾರರು ಮತ್ತು ಅವರ ಸಂಗಾತಿಗಳಿಗೆ ವೈದ್ಯಕೀಯ ಸೌಲಭ್ಯಗಳನ್ನು ಒದಗಿಸುವುದು. ಯಾವುದೇ ತಾರತಮ್ಯವಿಲ್ಲದೆ ಹೆಚ್ಚಿನ ಪಿಂಚಣಿ ಸೌಲಭ್ಯಗಳನ್ನು ಜಾರಿಗೊಳಿಸುವುದು (ದಿನಾಂಕ 01.09.2014 ಕ್ಕಿಂತ ಮೊದಲು ಮತ್ತು ನಂತರ ನಿವೃತ್ತರಾದವರಿಗೆ).ಈ ಪ್ರತಿಭಟನೆಯನ್ನು ಹಿರಿಯ ನಾಯಕ ಕಮಾಂಡರ್ ಅಶೋಕ್ ರಾವುತ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಅಧ್ಯಕ್ಷರಾದ ಶಿವಕುಮಾರ ಶೆಟಕಾರ, ಪ್ರಧಾನ ಕಾರ್ಯದರ್ಶಿ ಸುರೇಶ ಬಾಬು ಸೇರಿದಂತೆ ಕೆಎಸ ಆರ್ ಟಿ ಸಿ ನೀವೃತ ಸಿಬ್ಬಂಧಿಗಳು ಗಾಂದಿ ಗಂಜ ಬ್ಯಾಂಕಿನ ನೀವೃತ ಸಿಬ್ಬಂದಿಗಳು, ,ಡಿ.ಸಿಸಿ ಬ್ಯಾಂಕಿನ ನಿವೃತ್ತ ಸಿಬ್ಬಂಧಿಗಳು ಅನೇಕರು ಉಪಸ್ಥಿತರಿದ್ದರು.




## ಎಚ್‌ಐವಿ ಸೋಂಕು ತಡೆಗೆ ಜನಸಹಕಾರ ಅಗತ್ಯ-ಅರವಿಂದ ಕುಲಕರ್ಣಿ



ಬೀದರನ.19:ಎಚ್.ಐ.ವಿ. ಸೋಂಕಿನ ಹೊಸ ಪ್ರಕರಣಗಳನ್ನು ಸೊನ್ನೆಗೆ ತರುವ ಗುರಿ ಸಾಧಿಸಲು ಜನಸಾಮಾನ್ಯರ ಸಹಕಾರ ಅತ್ಯಗತ್ಯವಾಗಿದೆ ಎಂದು ಬ್ರಿಮ್ಸ್ ಆಸ್ಪತ್ರೆಯ ಐಸಿಟಿಸಿ ವಿಭಾಗದ ಪ್ರಯೋಗಶಾಲಾ ತಂತ್ರಜ್ಞ ಅಧಿಕಾರಿ ಅರವಿಂದ ಕುಲಕರ್ಣಿ ಹೇಳಿದರು.ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆಂಷನ್ ಸೊಸೈಟಿ (KSAPS) ಹಾಗೂ ಲಾಲ್ ಬಹದ್ದೂರ್ ಶಿಕ್ಷಣ ಸಂಸ್ಥೆ, ಬೀದರ ಅವರ ಸಂಯುಕ್ತಾಶ್ರಯದಲ್ಲಿ ಮನ್ನಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣೆ ಶಿಬಿರದಲ್ಲಿ ಅವರು ಮಾತನಾಡಿದರು. ಎಚ್‌ಐವಿ ಹರಡುವ ವಿಧಾನ ಮತ್ತು ತಡೆಯುವಿಕೆ ಕುರಿತು ಸರಳವಾಗಿ ವಿವರಿಸಿದ ಅವರು,

“ಎಲ್ಲೆಡೆಯೂ ಆರೋಗ್ಯ, ಎಲ್ಲರಿಗೂ ಆರೋಗ್ಯ” ಎಂಬ ಧ್ಯೇಯದೊಂದಿಗೆ ಉಚಿತ ಆರೋಗ್ಯ ತಪಾಸಣೆಗಳು ನಡೆಯುತ್ತಿವೆ. ಅರ್ಹರು ಪರೀಕ್ಷೆಗೆ ಮುಂದಾಗಬೇಕು” ಎಂದು ಹೇಳಿದರು. ಎಚ್‌ಐವಿ ಸೋಂಕಿಗೆ ಸಂಬಂಧಿಸಿದ ತಪ್ಪು ಕಲ್ಪನೆಗಳಿಂದಾಗಿ ಕಂಡುಬರುವ ಕಳಂಕ ಮತ್ತು ತಾರತಮ್ಯ ಜನಜಾಗೃತಿಯಿಂದ ಮಾತ್ರ ನಿವಾರಣೆಯಾಗುತ್ತದೆ ಎಂದು ಅವರು ತಿಳಿಸಿದರು.

“ಎಲ್ಲ ಸರ್ಕಾರಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಉಚಿತ–ಸೋಂಕಿತರು ಹಿಂಜರಿಯಬಾರದು,” ಎಂದು ಮನವಿ ಮಾಡಿದರು.

ಲಾಲ್ ಬಹದ್ದೂರ್ ಶಿಕ್ಷಣ ಸಂಸ್ಥೆಯ ಮೇಲ್ವಿಚಾರಕರಾದ ಆನಂದ ಪೌಲ್ ಅವರು ಮಾತನಾಡಿ,

ಸಂಸ್ಥೆಯು ಸರ್ಕಾರದ ಸಹಕಾರದಿಂದ ಸೋಂಕಿತರಿಗೆ ಮಾರ್ಗದರ್ಶನ, ಸಲಹೆ, ಆತ್ಮವಿಶ್ವಾಸ ವೃದ್ಧಿ ಹಾಗೂ ಚಿಕಿತ್ಸೆಗೆ ಪ್ರೇರಣೆ ಮಾಡುವ ಕಾರ್ಯಗಳನ್ನು ನಿರಂತರವಾಗಿ ನಡೆಸುತ್ತಿದೆ ಎಂದು ತಿಳಿಸಿದರು.

ಶಿಬಿರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರದ ಶುಶ್ರೂಷಕಿ ಸುವರ್ಣ, ಆಶಾ ಕಾರ್ಯಕರ್ತೆಯರಾದ ಲಕ್ಷ್ಮಿ, ಭಾರತಿ,ಸುಲೋಚನಾ, ಜಯಾ,ಚಂದ್ರಕಲಾ, ಹುಸೇನ ಬೇಗಮ್, ತಸ್ಲೀಮ್, ಮಹಬೂಬ್ ಬಿ, ಜಗದೇವಿ ಸೇರಿದಂತೆ ಹಲವು ಸಿಬ್ಬಂದಿ ಭಾಗವಹಿಸಿದ್ದರು. ಕಾರ್ಯಕ್ರಮಕ್ಕೆ ಲಾಲ್ ಬಹದ್ದೂರ್ ಶಿಕ್ಷಣ ಸಂಸ್ಥೆಯ ಸಂಪರ್ಕ ಕಾರ್ಯಕರ್ತ ಮಹಾದೇವಿ ನಿರೂಪಣೆ ಮಾಡಿದರು. ಭಾಗ್ಯಲಕ್ಷ್ಮಿ ವಂದಿಸಿದರು.

## ಲಕ್ಷ ದೀಪೋತ್ಸವಕ್ಕೆ ಡಾ.ಶೇಶಿ ಪಾಟೀಲ್ ಚೌಳಿ ಭಕ್ತಿ ಸಮರ್ಪಣೆ-ಭವ್ಯ ಕಾರ್ಯಕ್ರಮದಲ್ಲಿ ಸಾವಿರಾರು ಭಕ್ತರ ಸಂಭ್ರಮ

ಬಾದುರಗಾಂವ (ತೆಲಂಗಾಣ).ನ.19:ಬೀದರ ಉತ್ತರ ವಿಧಾನಸಭಾ ಕ್ಷೇತ್ರದ ಪ್ರಭಾವಿ ಸಾಮಾಜಿಕ–ರಾಜಕೀಯ ನಾಯಕನಾಗಿ ಜನಮನ ಗಳಿಸಿರುವ ಡಾ. ಶೇಶಿ ಪಾಟೀಲ್ ಚೌಳಿ ಅವರು ತೆಲಂಗಾಣದ ಬಾದುರಗಾಂವ ಗ್ರಾಮದಲ್ಲಿ ಆಯೋಜಿಸಲಾದ ಭವ್ಯ ಲಕ್ಷ ದೀಪೋತ್ಸವ ಕಾರ್ಯಕ್ರಮದಲ್ಲಿ ಭಾವಪೂರ್ಣವಾಗಿ ಭಾಗವಹಿಸಿದರು. ಗ್ರಾಮದ ಐತಿಹಾಸಿಕ ಪಂಚಲಿಂಗೇಶ್ವರ ದೇವಾಲಯದಲ್ಲಿ ನಡೆದ ಈ ಧಾರ್ಮಿಕ ಮಹೋತ್ಸವ ಭಕ್ತಿ, ನಂಬಿಕೆ ಮತ್ತು ಸಂಸ್ಕೃತಿಯ ಸಂಭ್ರಮದಿಂದ ನೂರಾರು ವರ್ಷಗಳ ಪರಂಪರೆಯನ್ನು ಮರುಜೀವಗೊಳಿಸಿದಂತಾಯಿತು.

ಲಕ್ಷಾರು ದೀಪಗಳಿಂದ ಕಂಗೊಳಿಸುತ್ತಿದ್ದ ದೇವಾಲಯ ಪರಿಸರದಲ್ಲಿ ಭಕ್ತರು ಹರ್ಷಭರಿತರಾಗಿ ಸೇರುವ ಮೂಲಕ ದೀಪೋತ್ಸವವು ಅಲೌಕಿಕ ವಾತಾವರಣವನ್ನು ಸೃಷ್ಟಿಸಿತ್ತು. ದೀಪದ ಬೆಳಕು ಮತ್ತು ಭಕ್ತರ ಮಂತ್ರಧ್ವನಿಗಳ ನಡುವೆಯೇ ಡಾ. ಶೇಶಿ ಪಾಟೀಲ್ ಚೌಳಿ ಅವರು ಪಂಚಲಿಂಗೇಶ್ವರ ದೇವರ ದರ್ಶನ ಪಡೆದು ಪೂಜೆ ಸಲ್ಲಿಸಿದರು.ಧಾರ್ಮಿಕ ವಿಧಿವಿಧಾನಗಳಲ್ಲಿ ಭಾಗವಹಿಸಿದ ಅವರು, ಸಮಾಜದ ಸಾಂಸ್ಕೃತಿಕ ಬಲ ಮತ್ತು ಒಗ್ಗಟ್ಟನ್ನು ಬಲಪಡಿಸುವಲ್ಲಿ ಇಂತಹ ಮಹೋತ್ಸವಗಳು ಅಮೂಲ್ಯವಾದ ಪಾತ್ರವಹಿಸುತ್ತವೆ ಎಂದು ಹೇಳಿದರು.

ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿದ ಅವರು, “ಲಕ್ಷ ದೀಪೋತ್ಸವದಂತಹ ಸಾಂಪ್ರದಾಯಿಕ ಕಾರ್ಯಕ್ರಮಗಳು ಕೇವಲ ಧಾರ್ಮಿಕ ಆಚರಣೆಗಳಲ್ಲ; ಅವು ನಮ್ಮ ಸಮಾಜದ ಆತ್ಮ, ಸಂಸ್ಕೃತಿ ಮತ್ತು ಐಕ್ಯತೆಯ ಪ್ರತೀಕ. ಯುವ ಪೀಳಿಗೆಗೆ ನಮ್ಮ ಪರಂಪರೆ ಪರಿಚಯಿಸುವ ಸುವರ್ಣಾವಕಾಶವೂ ಹೌದು,” ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಗಳಾಗಿ ಈ ಮಹೋತ್ಸವದಲ್ಲಿ ಆ ಕ್ಷೇತ್ರದ ಶಾಸಕರು, ಸಂಸದರು ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

ಗ್ರಾಮದ ಶಿವಮಂದಿರ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಯಾದಣ್ಣ ಅವರ ಮಾರ್ಗದರ್ಶನದಲ್ಲಿ ಕಾರ್ಯಕ್ರಮ ಯಶಸ್ವಿಯಾಗಿ ನಡೆದಿತು.

ಬೀದರನ ಖ್ಯಾತ ಕಲಾವಿದರಾದ ಕಾರ್ಯಕ್ರಮದ ಮತ್ತೊಂದು ವಿಶೇಷ ಅಂಶವಾಗಿದ್ದುದೇ ಬೀದರ ಜಿಲ್ಲೆಯ ಹೆಸರಾಂತ ಕಲಾವಿದರ ರಾಜ್ಯ ಪ್ರಶಸ್ತಿ ಪುರಸ್ಕೃತರು ಮತ್ತು ಖ್ಯಾತ ತಬಲಾ ವಾದಕರಾದ, ಪುಂಡಲಿಕ್ ರಾವ ಪಾಟೀಲ್ ಗುಮ್ಮಾ,ಓಂ ಪ್ರಕಾಶ್ ಬಜಾರೆ, ನಾಗಶೆಟ್ಟಿ ಅಲಿಯಂಬರ್, ರಮೇಶ್ ಫತ್ತೇಪೂರ, ಓಂ ಬಸವರಾಜ್ ಕೌಡಗಾಂವ, ಮಲ್ಲಿಕಾರ್ಜುನ ನಾಗಮಾರಪಳ್ಳಿ, ಸಂಜು ಕುಮಾರ ಸ್ವಾಮಿ ಉಜನಿ,ಸುನೀಲ ಫತ್ತೇಪೂರ ಉಪಸ್ಥಿತರಿದ್ದರು.

ಸ್ಥಳೀಯ ಗ್ರಾಮಸ್ಥರು, ಮಹಿಳೆಯರು, ಯುವಕರು ಮತ್ತು ಮಕ್ಕಳೂ ಸಹ ದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡು ದೀಪೋತ್ಸವವನ್ನು ಅದ್ದೂರಿಯಾಗಿ ನೆರವೇರಿಸಿದರು ಎಂದು ಸಂತೋಷ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



# ರೌಡಿ ಶೀಟರ್ ಶೇಖ್ ಶೋಹೆಬ್ ಹುಸೈನ್ ಗಡಿಪಾರು



ಕಲಬುರಗಿ,ನ.19:ನಗರದ ಎಂ.ಬಿ.ನಗರ ಪೊಲೀಸ್ ಠಾಣೆ ವ್ಯಾಪ್ತಿಯ ರೌಡಿ ಶೀಟರ್ ಶೇಖ್ ಶೋಹೆಬ್ ಹುಸೈನ್ (30) ಅವರನ್ನು ಕೊಡಗು ಜಿಲ್ಲೆಯ ವಿರಾಜ ಪೇಟ್ ರೂರಲ್ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಲಾಗಿದೆ.

ನಗರದ ಸಂತ್ರಸವಾಡಿ ನಿವಾಸಿಯಾದ ರೌಡಿಶೀಟರ್ ಶೇಖ್ ಶೋಹೆಬ್ ಹುಸೈನ್ ಮೇಲೆ ಎಂ.ಬಿ.ನಗರ ಪೊಲೀಸ್ ಠಾಣೆಯಲ್ಲಿ ವಿವಿಧ ಕಲಂಗಳ ಅಡಿಯಲ್ಲಿ ಒಟ್ಟು 9 ಪ್ರಕರಣಗಳು ದಾಖಲಾಗಿವೆ. ಈತ ರೂಢಿಗತ ಅಪರಾಧಿಯಾಗಿದ್ದು, 2009 ರಿಂದ 2025ನೇ ಸಾಲಿನವರೆಗೆ ಭಾರತೀಯ ದಂಡ ಸಂಹಿತೆ ಅಡಿಯಲ್ಲಿ 5 ಪ್ರಕರಣಗಳು, ಬಿಎನ್‌ಎಸ್ ಕಾಯ್ದೆ-2023 ರಲ್ಲಿ 1 ಪ್ರಕರಣ ಮತ್ತು ದಂಡ ಪ್ರಕ್ರಿಯೆ ಅಡಿಯಲ್ಲಿ 3 ಸೇರಿ ಒಟ್ಟು 9 ಪ್ರಕರಣ ದಾಖಲಾಗಿವೆ. ಈತ ರೂಢಿಗತ ಅಪರಾಧಿತನಾಗಿದ್ದು, ಆರೋಪಿಯನ್ನು "ಎ"ರೌಡಿ ಎಂದು ಗುರುತಿಸಲಾಗಿದೆ.

ಆರೋಪಿಯು ಸಾರ್ವಜನಿಕ ಸ್ಥಳಗಲಲ್ಲಿ ಹೊಡೆದಾಟ, ಅಪಾಯಕಾರಿ ಆಯುಧಗಳಿಂದ ಸ್ವ ಇಚ್ಛೆಯಿಂದ ಗಾಯವನ್ನುಂಟು ಮಾಡುವುದು, ಅಕ್ರಮ ಪ್ರತಿಬಂಧಕ, ಶಾಂತಿ ಭಂಗವನ್ನುಂಟು ಮಾಡಲು ಪ್ರಚೋದನೆ ನೀಡುವುದು ಮತ್ತು ಕೊಲೆ ಹಾಗೂ ಅಕ್ರಮವಾಗಿ ಗಾಂಜಾ ಹೊಂದುವಂತಹ ಕಾನುನು ಬಾಹಿರ ಚಟುವ ಟಿಕೆಗಳಲ್ಲಿ ಭಾಗಿಯಾಗುತ್ತ ಸಾರ್ವಜನಿಕರ ಶಾಂತಿ ಮತ್ತು ನೆಮ್ಮದಿಗೆ ಭಂಗ ತರುವ ಪ್ರಕರಣಗಳಲ್ಲಿ ಪ್ರಮುಖ ಆರೋಪಿಯಾಗಿದ್ದಾನೆ.ನಗರ ಪೊಲೀಸ್ ಆಯುಕ್ತ ಡಾ.ಶರಣಪ್ಪ ಎಸ್.ಡಿ .ಅವರ ನಿರ್ದೇಶನದ ಮೇರೆಗೆ ಆರೋಪಿಯನ್ನು ಗಡಿಪಾರು ಮಾಡುವುದು ಸೂಕ್ತ ಎಂದು ಎಂ.ಬಿ.ನಗರ ಪೊಲೀಸ್ ಠಾಣೆ ಪಿಐ ಶಿವಾನಂದ ವಾಲಿಕರ್ ಅವರು ವರದಿ ನೀಡಿರುವ ಹಿನ್ನೆಲೆಯಲ್ಲಿ ಉಪ-ಪೊಲೀಸ್ ಆಯುಕ್ತರು ಹಾಗೂ ನ್ಯಾಯಾಲಯದ ವಿಶೇಷ ಕಾರ್ಯನಿರ್ವಾಹಕ ದಂಡಾಧಿಕಾರಿ ಅವರು ವಿಚಾರಣೆ ಕೈಗೊಂಡು ಆರೋಪಿಯನ್ನು ಕೊಡಗು ಜಿಲ್ಲೆಯ ವಿರಾಜ್ ಪೇಟೆ ರೂರಲ್ ಪೊಲೀಸ್ ಠಾಣೆ ವ್ಯಾಪ್ತಿಗೆ ಗಡಿಪಾರು ಮಾಡಿ ಆದೇಶ ಹೊರಡಿಸಿದ್ದಾರೆ.

# ಇನಕ್ಯೂಬೆಶನ್-ಅರಿವು ಮೂಡಿಸುವ ಕಾರ್ಯಕ್ರಮ ಯಶಸ್ವಿ

ವಿಜಯಪುರ,ನ.19: ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಂಗಳೂರಿನ ಕೆ.ಸಿ. ಟಿ.ಯು ಹಾಗೂ ಬೆಂಗಳೂರಿನ ವಿ ಕೇರ್ ಸೊಸೈಟಿ ಇವರ ಸಹಯೋಗದಲ್ಲಿ ಎಂ.ಎಸ್. ಎಂ.ಇ. ಇವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವುದು ಮತ್ತು ವೇಗಗೊಳಿಸುವ ಯೋಜನೆಯಡಿಯಲ್ಲಿ ಇನಕ್ಯೂಬೆಶನ್ ಅರಿವು ಮೂಡಿಸುವ ಕಾರ್ಯಕ್ರಮವನ್ನು ಸಿಕ್ಯಾಬ್ ಇನ್ ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜಿನಲ್ಲಿ ಶನಿವಾರ ಹಮ್ಮಿಕೊಳ್ಳಲಾಗಿತ್ತು.

ಸಿಡಾಕ್‌ನ ಜಂಟಿ ನಿರ್ದೇಶಕಿ ಸುಪ್ರಿತಾ ಬಳ್ಳಾರಿ ಮಾತನಾಡಿ, ಇಂಜಿನಿಯರಿಂಗ್ ಪದವಿಯ ನಂತರ ಸ್ವಂತ ಉದ್ಯಮ ಸ್ಥಾಪಿಸಲು ಪಡೆಯ ಬೇಕಾದ ಅಗತ್ಯ ವೃತ್ತಿ ನೈಪುಣ್ಯತೆ ತರಬೇತಿ ಮತ್ತು ಕೈಗಾರಿಕೆಗಳನ್ನು ಸ್ಥಾಪಿಸಲು ತೆಗೆದುಕೊಳ್ಳುವ ಕ್ರಮಗಳ ಕುರಿತಾಗಿ ವಿಸ್ತೃತವಾಗಿ ವಿವರಿಸಿದರು. ಸ್ವ ಉದ್ಯೋಗ ಸ್ಥಾಪಿಸುವ ಮೂಲಕ ತಾವು ಉದ್ಯೋಗಿಯಾಗುವುದಲದೇ ಇತರರಿಗೂ ಉದ್ಯೋಗ ನೀಡಲು ವಿಫುಲ ಅವಕಾಶ ಕಲ್ಪಿಸಿದಂತಾಗುತ್ತದೆ ಎಂದು ಅವರು ಹೇಳಿದರು.

ಆರ್ಥಿಕ ಸಾಕ್ಷರತಾ ಆಪ್ತ ಸಮಾಲೋಚಕ ಈರಣ್ಣ ಚಿಮ್ಮಲಗಿ ಅವರು ಸ್ವಯಂ ಉದ್ಯೋಗ ಕೈಗೊಳ್ಳಲು ಬ್ಯಾಂಕಿನ ಮೂಲಕ ದೊರೆಯುವ ಸಾಲ ಸೌಲಭ್ಯ ಅನುಷ್ಠಾನಗೊಳಿಸುವ ಸರ್ಕಾರದ ಯೋಜನೆಗಳಾದ ಪಿ.ಎಂ.ಇ.ಜಿ.ಪಿ. ಯೋಜನೆ, ಮುದ್ರಾ ಯೋಜನೆ ಹಾಗೂ ಸ್ಟ್ಯಾಂಡ್ ಅಫ್ ಯೋಜನೆ ಬಗ್ಗೆ ಅವರು ವಿವರಿಸಿದರು.

ಸಿಕ್ಯಾಬ್ ಇನಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿಯ ಮೆಕ್ಯಾನಿಕಲ್ ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥರಾದ ಸಚಿನ ಪಾಂಡೆ ಅವರು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ಜಿಲ್ಲಾ ಕೈಗಾರಿಕಾ ಕೇಂದ್ರದ ಜಂಟಿ ನಿರ್ದೇಶಕ ಗಂಗಾಧರ ದೇಸಾಯಿ ಅವರು ಪ್ರಾಸ್ತಾವಕವಾಗಿ ಮಾತನಾಡಿದರು. ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯಕ ನಿರ್ದೇಶಕರಾದ ಸಂತೋಷ ಸಜ್ಜನ ಸೇರಿದಂತೆ ಇತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.




# ಸಹಕಾರಿ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಗೆ ಸಂದ ಗೌರವ:ಪಾಟೀಲ

ತಾಳಿಕೋಟೆ:ನ.19: ಸಹಕಾರ ಎಂಬುದು ಪ್ರತಿಯೊಬ್ಬ ಮನುಷ್ಯನ ಬೆಳವಣಿಗೆಗೆ ಅಗತ್ಯವಾದ ಬಿಂಧುವಾಗಿದೆ ಅಂತಹ ಸಹಕಾರವಿಲ್ಲದಿದ್ದರೆ ಜೀವನದಲ್ಲಿ ಏನನ್ನು ಸಾದಿಸಲು ಸಾದ್ಯವಿಲ್ಲಾ ನಾನು ಕಳೆದ 25 ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರವು ರಾಜ್ಯಮಟ್ಟದ ಸಹಕಾರ ರತ್ನ ಪ್ರಶಸ್ತಿ ನೀಡಿರುವದು ನನಗೆ ಇನ್ನಷ್ಟು ಜವಾಬ್ದಾರಿಯನ್ನು ಹೆಚ್ಚಿಸಿದಂತಾಗಿದೆ ಎಂದು ಯರನಾಳ ಯುವಸಿರಿ ಸೌಹಾರ್ದ ಸಹಕಾರಿ ಸಂಘ ನಿ,ದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಪಾಟೀಲ ಅವರು ಹೇಳಿದರು.



ಕರ್ನಾಟಕ ಸರ್ಕಾರದ ವತಿಯಿಂದ 72ನೇ ಸಹಕಾರಿ ಸಪ್ತಾಹ ಕಾರ್ಯಕ್ರಮದಲ್ಲಿ ಯುವಸಿರಿ ಸೌಹಾರ್ದ ಸಹಕಾರಿ ಸಂಘ ನಿ,ದ ಸಂಸ್ಥಾಪಕ ಅಧ್ಯಕ್ಷ ಶಂಕರಗೌಡ ಪಾಟೀಲ ಅವರಿಗೆ ರಾಜ್ಯಮಟ್ಟದ ಸಹಕಾರ ರತ್ನ ಪ್ರಶಸ್ತಿ ಲಭಿಸಿದ್ದಕ್ಕೆ ಸೋಮವಾರರಂದು ಯುವಸಿರಿ ಸೌಹಾರ್ದ ಸಹಕಾರಿ ಸಂಘ ನಿ,ದ ತಾಳಿಕೋಟೆ ಶಾಖೆಯಲ್ಲಿ ಸಂಘದ ಸಲಹಾ ಸಮಿತಿ ಸದಸ್ಯರು ಹಾಗೂ ಸಿಬ್ಬಂದಿಗಳು ಅಲ್ಲದೇ ಗ್ರಾಹಕರ ವತಿಯಿಂದ ಏರ್ಪಡಿಸಲಾದ ಸನ್ಮಾನ ಸಮಾರಂಭದಲ್ಲಿ ಸನ್ಮಾನ ಸ್ವಿಕರಿಸಿ ಮಾತನಾಡುತ್ತಿದ್ದ ಅವರು ಸಹಕಾರ ಬ್ಯಾಂಕುಗಳು ಕಟ್ಟುವದು ಸುಲಬವಲ್ಲಾ ಕಟ್ಟಿದ ಸಂಸ್ಥೆಯನ್ನು ಮುನ್ನಡೆಸಿಕೊಂಡು ಹೋಗಬೇಕಾದರೆ ಸಾಕಷ್ಟು ಎಡರು ತೊಡರುಗಳು ಬರುತ್ತವೆ ಅವುಗಳೆಲ್ಲವನ್ನು

ಜಯಿಸಿಕೊಂಡು ಮುಂದೆ ಸಾಗಬೇಕಾಗುತ್ತದೆ ಕಳೆದ 25 ವರ್ಷಗಳಲ್ಲಿ ಸಹಕಾರಿ ಕ್ಷೇತ್ರದಲ್ಲಿ ನಾನು ಸಲ್ಲಿಸುತ್ತಿದ್ದ ಸೇವೆಯ ಸಂದರ್ಬದಲ್ಲಿ ನಾನು ಗ್ರಾಹಕರೊಂದಿಗೆ ಸಿಬ್ಬಂದಿಗಳೊಂದಿಗೆ ಹೊಂದಿದ್ದ ಅವಿನಾಭಾವ ಸಂಬಂದದಿಂದ ಯುವ ಸಿರಿ ಸೌಹಾರ್ದ ಸಹಕಾರಿ ಸಂಘ ನಿ,ವು ಕಳೆದ 4 ವರ್ಷಗಳಲ್ಲಿ ಉನ್ನತವಾಗಿ ಬೆಳೆದು ನಿಲ್ಲಲು ಸಾದ್ಯವಾಗಿದೆ ಕಳೆದ 4 ವರ್ಷಗಳಲ್ಲಿ ನನ್ನ ಮೇಲೆ ಯುವಸಿರಿ ಸೌಹಾರ್ದ ಸಹಕಾರಿ ಸಂಘದ ಮೇಲೆ ವಿಸ್ವಾಸವನ್ನಿಟ್ಟ ಗ್ರಾಹಕರು 25 ಕೋಟಿ ರೂ. ಠೇವಣಿಯನ್ನು ಮಾಡಿದ್ದಾರೆ ಅದರಲ್ಲಿ ಈಗಾಗಲೇ 20 ಕೋಟಿ ರೂ. ಸಾಲವನ್ನು ನೀಡಲಾಗಿದ್ದು ಅಲ್ಪ ಅವಧಿಯಲ್ಲಿಯೇ 8 ಶಾಖೆಗಳನ್ನು ಪ್ರಾರಂಬಿಸಲಾಗಿದೆ ಅದರಲ್ಲಿ ತಾಳಿಕೋಟೆ ತಾಲೂಕಿನ ಹಿರೂರ ಗ್ರಾಮದಲ್ಲಿ 9ನೇ ಶಾಖೆಯನ್ನು ಸೀಘ್ರದಲ್ಲಿಯೇ ಪ್ರಾರಂಬಿಸಲು ಸಿದ್ದತೆ ನಡೆಸಲಾಗಿದೆ ಜನರ ಸಹಕಾರವೆಂಬುದು ಇದ್ದರೆ ಜೀವನದಲ್ಲಿ ಸಾಧನೆಯ ಗುರಿಯನ್ನು ಮುಟ್ಟುವದರೊಂದಿಗೆ ಬೆಳೆಯಬಹುದಾಗಿದೆ ನಾನು ಕಳೆದ 25 ವರ್ಷಗಳಿಂದ ಸಹಕಾರಿ ಕ್ಷೇತ್ರದಲ್ಲಿ ಸಲ್ಲಿಸಿದ ಸೇವೆಯನ್ನು ಗುರುತಿಸಿ ಕರ್ನಾಟಕ ಸರ್ಕಾರವು ಸಹಕಾರ ರತ್ನ ಪ್ರಶಸ್ತಿ ನೀಡಿದಕ್ಕೆ ನಮ್ಮ ಯುವ ಸಿರಿ ಸೌಹಾರ್ದ ಸಹಕಾರಿ ಸಂಘ ನಿ,ದ ತಾಳಿಕೋಟೆ ಶಾಖೆಯ ಸಲಹಾ ಸಮಿತಿ ಸದಸ್ಯರು ಅಲ್ಲದೇ ಸಿಬ್ಬಂದಿಗಳು ಗ್ರಾಹಕರು ಸನ್ಮಾನಿಸಿ ಗೌರವಿಸಿರುವದು ಸಹಕಾರಿ ಕ್ಷೇತ್ರಕ್ಕೆ ಇನ್ನಷ್ಟು ಸೇವೆ ನನ್ನಿಂದ ಬಯಸಿದಂತಾಗಿದೆ ಅಲ್ಲದೇ ನನಗೆ ಇನ್ನಷ್ಟು ಜವಾಬ್ದಾರಿ ಹೆಚ್ಚಿಸಿದಂತಾಗಿದೆ ನಿಮ್ಮೆಲ್ಲರ ಅಭಿಮಾನಕ್ಕೆ ನಾನು ಚೀರೃಣಿಯಾಗಿದ್ದೇನೆ ಅಲ್ಲದೇ ಸಹಕಾರಿ ಕ್ಷೇತ್ರದ ಸೇವೆಯಲ್ಲಿ ಸದಾ ನಾನು ತೊಡಗಿಕೊಳ್ಳುತ್ತೇನೆಂದರು.

# ಕರಜಗಿ:ವೈಭವದಿಂದ ಜರುಗಿದ ಸೈಫನ್ ಮುಲ್ಕ್ ಜಾತ್ರಾ ಮಹೋತ್ಸವ

ಕರಜಗಿ:ನ.19: ಅಫಜಲಪುರ ತಾಲೂಕಿನ ಕರಜಗಿ ಗ್ರಾಮದಲ್ಲಿ ಹಜರತ್ ಖಾಜಾ ಸೈಫನ್ ಮುಲ್ಕ್ ಜಾತ್ರಾ ಮಹೋತ್ಸವ ಸೋಮವಾರ ಭಕ್ತ ಸಾಗರ ಮಧ್ಯೆ ಭಕ್ತಿ, ಸಂಪ್ರದಾಯ, ಸಂಸ್ಕೃತಿ ಮಿಶ್ರಣದ ಅದ್ದೂರಿ ವಾತಾವರಣದಲ್ಲಿ ಯಶಸ್ವಿಯಾಗಿ ಜರುಗಿತು. ಜಾತ್ರೆಗೆ ಹತ್ತಿರದ ಗ್ರಾಮ-ಹಳ್ಳಿಗಳಿಂದ ಸಾವಿರಾರು ಭಕ್ತರು ಆಗಮಿಸಿದ್ದರು.

ಭಾನುವಾರ ರಾತ್ರಿ 11.30ಕ್ಕೆ ಕರಜಗಿ ಗ್ರಾಮದಲ್ಲಿ ಸಾಂಪ್ರದಾಯಿಕ ಗಂಧ ಮತ್ತು ಗಲಾಪ್ ಹೊತ್ತ ಜೋಡಿ ಎತ್ತುಗಳಿಗೆ ಭಕ್ತರು ಜೈಕಾರ ಕೂಗಿ ಮೆರವಣಿಗೆಗೆ ಚಾಲನೆ ನೀಡಿದರು. ತಾಳ-ವಾದ್ಯಗಳ ನಾದ, ಭಕ್ತರ ಘೋಷಣೆಗಳು ಮೆರವಣಿಗೆಗೆ ವಿಶೇಷ ಭವ್ಯತೆ ಒದಗಿತು.ಮೆರವಣಿಗೆಯು ಇಡೀ ರಾತ್ರಿ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ಸೋಮವಾರ ಬೆಳಗ್ಗೆ ಹೈದ್ರಾ ಗ್ರಾಮದ ಹಜರತ್ ಖಾಜಾ ಸೈಫನ್ ಮುಲ್ಕ್ ದರ್ಗಾಕ್ಕೆ ತಲುಪಿತು. ಗಂಧ ಲೇಪನ ಆಚರಣೆಯ ನಂತರ ಜೋಡಿ ಎತ್ತುಗಳು ಮಧ್ಯಾಹ್ನ 2 ಗಂಟೆಗೆ ಕರಜಗಿಗೆ ಪುನಃ ಆಗಮಿಸಿದವು. ಎತ್ತುಗಳ ಗಂಧ ಲೇಪನ ಶತಮಾನಗಳ ಸಂಪ್ರದಾಯ ಜಾತ್ರೆಯುಳ್ಳ ಎತ್ತುಗಳು ಗಂಧ ಲೇಪನಕ್ಕೆ ಒಂದು ದಿನ ಮುಂಚೆಯೇ ಆಹಾರ ಸೇವಿಸದೇ ಇರುವ ಸಂಪ್ರದಾಯ ಈ ಬಾರಿ ಕೂಡ ಪಾಲಿಸಲಾ ಯಿತು. ಗಂಧ' ಲೇಪನವಾದ ನಂತರವೇ ಎತ್ತುಗಳಿಗೆ ಆಹಾರ ನೀಡುವ ಆಚರಣೆ ವಿಶೇಷ ಆಕರ್ಷಣೆಯಾಗಿದೆ.

ಸುತ್ತ-ಮುತ್ತಲಿನ ಹಳ್ಳಿಗಳ ನೂರಾರು ಜೋಡಿ ಎತ್ತುಗಳು ಗಂಧ ಲೇಪನದಲ್ಲಿ ಪಾಲ್ಗೊಂಡು ಜಾತ್ರೆಯ ಭವ್ಯತೆಯನ್ನು ಹೆಚ್ಚಿಸಿವೆ. ವೆಂಕಟೇಶ ಮೂಗ್ರೆ ಅವರ ಜೋಡಿ ಎತ್ತುಗಳನ್ನು ಈ ಬಾರಿ ವಿಶೇಷ ವಾಗಿ ಅಲಂಕರಿಸಲಾಗಿದ್ದು, ಭಕ್ತರ ಗಮನ ಸೆಳೆದವು.

ಭಕ್ತಿಯ ಬಂಡಿ ಕೂತ ನಂತರ ಭಕ್ತರು "ಸೈಫನ್ ಮುಲ್ಕ್ ಕಿ ದೋಸ್ತರ ಹೋ ದಿನ್" ಎಂದು ಜೈಘೋಷ ಕೂಗಿ ಭಕ್ತಿಭಾವವನ್ನು ವ್ಯಕ್ತಪಡಿಸಿದರು. ಜಾತ್ರೆಯಲ್ಲಿ ಎಲ್ಲ ವರ್ಗದ ಜನರು ಧಾರ್ಮಿಕ ಸಾಮರಸ್ಯದ ವಾತಾವರಣದಲ್ಲಿ ಭಾಗವಹಿಸಿದರು.

ಈ ಜಾತ್ರೆಯಲ್ಲಿ ಕೆಕೆಆರ್‌ಟಿಸಿ ಅಧ್ಯಕ್ಷ ಅರಣ ಕುಮಾರ್ ಪಾಟೀಲ್ ಪಾಲ್ಗೊಂಡು ದರ್ಗಾದಲ್ಲಿ ಆಶೀರ್ವಾದ ಪಡೆದುಕೊಂಡರು.

ಪ್ರಮುಖರಾದ ವೆಂಕಟೇಶ್ ಮೊಗ್ರೆ, ಗೌಡಪ್ಪಗೌಡ ಪಾಟೀಲ್, ಭೀಮಾಶಂಕರ್ ಹೊನ್ಕೇರಿ, ರಾಜು ಜಿಡ್ಡಗಿ, ಕಾಂತು ಉಪ್ಪಿನ್, ಮಲ್ಲಮ್ಮ ಪಟೋಳೆ, ಬಶೀರ್ ಚೌದ್ರಿ, ಇಸ್ಮಾಯಿಲ್ ಮುಲ್ಲಾ, ಅಬ್ದುಲ್ ಮುಲ್ಲಾ, ಇಮ್ರಾನ್ ಮುಲ್ಲಾ, ಇರ್ಫಾನ್ ಜಮಾದಾರ್, ಶರಣು ಈಶ್ವರ ಗೊಂಡ, ಪೀರಪ್ಪ ನಾಯ್ಕೋಡಿ ಹಾಗೂ ಅನೇಕರು ಜಾತ್ರೆಯಲ್ಲಿ ಉಪಸ್ಥಿತರಿದ್ದರು.





# ಅಜಾದ್ ಅವರ ಕೊಡುಗೆ ಉನ್ನತ ಶಿಕ್ಷಣಕ್ಕೆ ಅಮೂಲ್ಯ:ಡಾ.ರಾಮು ಸಜ್ಜನ



ವಿಜಯಪುರ,ನ.19: ಮೌಲಾನಾ ಅಜಾದ್ ಅವರು ಉನ್ನತ ಶಿಕ್ಷಣ ಕ್ಷೇತ್ರಕ್ಕೆ ನೀಡಿದ ಕೊಡುಗೆ ಅಪ್ರತಿಮವಾಗಿದ್ದು, ಅವರ ತತ್ವಗಳು ಇಂದಿನ ಪೀಳಿಗೆಗೂ ಮಾರ್ಗದರ್ಶಕವಾಗಿವೆ ಎಂದು ಮುದ್ದೇಬಿಹಾಳದ ಎಂ.ಜಿ.ವಿ.ಸಿ. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಮಹಾವಿದ್ಯಾಲಯದ ಇತಿಹಾಸ ವಿಭಾಗದ ಸಹ ಪ್ರಾಧ್ಯಾಪಕ ಡಾ. ರಾಮು ಹಸನಪ್ಪ ಸಜ್ಜನ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಮೌಲಾನಾ ಅಜಾದ್ ಅಧ್ಯಯನ ಕೇಂದ್ರದ ವತಿಯಿಂದ ಇತ್ತೀಚಿಗೆ ಹಮ್ಮಿಕೊಂಡಿದ್ದ ಮೌಲಾನಾ ಅಜಾದ್ ಅವರ ಜನ್ಮದಿನದ ಅಂಗವಾಗಿ "ರಾಷ್ಟ್ರೀಯ ಶಿಕ್ಷಣ ದಿನಾಚರಣೆ" ಕುರಿತ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಮಹಿಳೆಯರು ಶಿಕ್ಷಣದ ಅಭಿವೃದ್ಧಿ ಮೂಲಕ ಸಮಾಜದ ಪ್ರಗತಿಗೆ ಪೂರಕವಾಗಬೇಕು. ಶಿಕ್ಷಣವು ಕೇವಲ ಜ್ಞಾನವಲ್ಲ, ಅದು ಸಾಮಾಜಿಕ ಬದಲಾವಣೆಗೆ ದಾರಿ ತೋರಿಸುವ ಅತ್ಯಂತ ಮಹತ್ವದ ಅಂಶವಾಗಿದೆ ಎಂದು ಹೇಳಿದರು.

ವಿಶ್ವವಿದ್ಯಾನಿಲಯದ ಕುಲಸಚಿವ ಶಂಕರಗೌಡ ಸೋಮನಾಳ ಮಾತನಾಡಿ, ವಿದ್ಯಾರ್ಥಿನಿಯರಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಲು ಮೌಲಾನಾ ಅಜಾದ್ ಅವರ ಜೀವನಾಧಾರಿತ ರಸಪ್ರಶ್ನೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ,

ವಿದ್ಯಾರ್ಥಿನಿಯರು ಇಂತಹ ಚಟುವಟಿಕೆ ಗಳ ಮೂಲಕ ಹೆಚ್ಚಿನ ಜ್ಞಾನ'ವನ್ನು ಪಡೆದುಕೊಂಡು, ಆತ್ಮ ವಿಶ್ವಾಸದಿಂದ ಮುನ್ನಡೆಯಬೇಕು ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮಹಿಳಾ ವಿವಿಯ ಕುಲಪತಿ ಪ್ರೊ. ವಿಜಯಾ ಬಿ. ಕೋರಿಶೆಟ್ಟಿ, ಮೌಲ್ಯಮಾಪನ ಕುಲಸಚಿವ ಪ್ರೊ. ಬಿ.ಎಲ್. ಲಕ್ಕಣ್ಣವರ, ಹಾಗೂ ಮಹಿಳಾ ವಿವಿಯ ವಿವಿಧ ವಿಭಾಗಗಳ ವಿಧ್ಯಾರ್ಥಿನಿಯರು, ಪ್ರಾಧ್ಯಾಪಕರು, ಬೋಧಕ, ಬೋಧಕೇತರ ಸಿಬ್ಬಂದಿ ವರ್ಗದವರು ಮತ್ತು ಉಪಸ್ಥಿತರಿದ್ದರು.

ಹಿಂದಿ ವಿಭಾಗದ ಸಂಶೋಧನಾ ವಿದ್ಯಾರ್ಥಿನಿ ಪದ್ಮಶ್ರೀ ಚೌಗಲೆ ನಿರೂಪಿಸಿದರು. ಡಾ. ಗುಲಾಬ ರಾಠೋಡ ಪ್ರಾಸ್ತಾವಿಕ ನುಡಿಗಳನ್ನಾಡಿ, ಸ್ವಾಗತಿಸಿದರು. ಸಮಾಜಕಾರ್ಯ ವಿಭಾಗದ ವಿದ್ಯಾರ್ಥಿನಿ ರಾಣಿ ತಿಮ್ಮಗೌಡರ ಅತಿಥಿ ಪರಿಚಯಿಸಿದರು, ಅಕ್ಷತಾ ರಾಠೋಡ ವಂದಿಸಿದರು.

# ಜಿಲ್ಲಾಧಿಕಾರಿಗಳಿಂದ ಮಾಡಬೂಳಪ್ರಾಣಿ ಸಂಗ್ರಹಾಲಯ ಕಾಮಗಾರಿ ವೀಕ್ಷಣೆ

ಕಲಬುರಗಿ,ನ.19: ಜಿಲ್ಲಾಧಿಕಾರಿ ಬಿ.ಫೌಜಿಯಾ ತರನ್ನುಮ್ ಅವರು ಸೋಮವಾರ ಕಾಳಗಿ ತಾಲೂಕಿನ ಮಾಡಬೂಳನಲ್ಲಿ ಅರಣ್ಯ ಇಲಾಖೆಯಿಂದ ನಿರ್ಮಾಣದ ಹಂತದಲ್ಲಿರುವ ಮಾಡಬೂಳ ಪ್ರಾಣಿ ಸಂಗ್ರಹಾಲಯ ಕಾಮಗಾರಿ ಪರಿಶೀಲಿಸಿದರು.

ಪ್ರಾದೇಶಿಕ ಉಪ ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ ಪಾಟೀಲ ಅವರೊಂದಿಗೆ ಕಾಮಗಾರಿ ಸ್ಥಳ ಪರಿಶೀಲಿಸಿದ ಅವರು, ನಿಗದಿತ ಸಿವಿಲ್ ಕಾಮಗಾರಿಗಳ ಕೆಲಸಗಳು ಕಾಲಮಿತಿಯಲ್ಲಿಯೇ ಕೆಲಸ ಪೂರ್ಣಗೊಳಿಸಬೇಕು. ಪ್ರಾಣಿ, ಪಕ್ಷಿಗಳಿಗೆ ಪೂರಕವಾದ ವಾತಾವರಣ ಇಲ್ಲಿ ಸೃಷ್ಟಿಸಬೇಕು ಎಂದು ಅರಣ್ಯ ಅಧಿಕಾರಿಗಳಿಗೆ ಸೂಚಿಸಿದರು.

ಇದಕ್ಕು ಮುನ್ನ ಕಾಳಗಿ ತಾಲೂಕಿನ ಕೋಡ್ಲಿ ಗ್ರಾಮದಲ್ಲಿ ನಬಾರ್ಡ್ ಅನುದಾನದಿಂದ ನಿರ್ಮಿಸಲಾಗಿರುವ ಆಗ್ರೋ ಪ್ರೊ??ಸೆಸಿಂಗ್ ಕೇಂದ್ರವನ್ನು ವೀಕ್ಷಿಸಿದರು. ಸ್ಥಳದಲ್ಲಿದ್ದ ರೈತರೊಂದಿಗೆ ಸಂವಾದ ನಡೆಸಿ ಎಫ್.ಪಿ.ಓ ಸದ್ಬಳಕೆ ಮಾಡಿಕೊಳ್ಳುವಂತೆ ರೈತರಿಗೆ ತಿಳಿಹೇಳಿದರು. ನಂತರ ಸರ್ಕಾರಿ ಪ್ರೌಢ ಶಾಲೆ, ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆಗೆ ಭೇಟಿ ನೀಡಿ ಮಕ್ಕಳಿಗೆ ಶಾಲೆಯಲ್ಲಿ ಗುಣಮಟ್ಟದ ಶಿಕ್ಷಣದ ಜೊತೆಗೆ ನೀಡಲಾಗುತ್ತಿರುವ ರುಚಿ-ಶುಚಿಯಾದ ಊಟ, ವಸತಿ ಕುರಿತು ಮಕ್ಕಳಿಂದ ಮಾಹಿತಿ ಪಡೆದರು.ಕೋಡ್ಲಿ ನಾಡ ಕಚೇರಿಗೂ ಭೇಟಿ ನೀಡಿದ ಡಿ.ಸಿ.ಅವರು, ಕಾಲಮಿತಿಯಲ್ಲಿಯೇ ಅರ್ಜಿ ವಿಲೇವಾರಿ ಮಾಡಬೇಕೆಂದು ಎ.ಜೆ.ಎಸ್.ಕೆ ಸಿಬ್ಬಂದಿಗಳಿಗೆ ಸೂಚಿಸಿದರು.ಇದಲ್ಲದೆ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ರೋಗಿಗಳೊಂ ದಿಗೆ ಚರ್ಚಿಸಿ ಅಲ್ಲಿ ನೀಡಲಾ ಗುತ್ತಿರುವ ಔಷದೋಪಚಾ ರದ ಬಗ್ಗೆ ಮಾಹಿತಿ ಪಡೆದು ಕೊಂಡರು. ಕಾಳಗಿ ತಹಶೀಲ್ದಾರ ಕಚೇರಿಯ ಅಭಿಲೇ ಖಾಲಯ ಕೊಠಡಿಗೆ ಭೇಟಿ ನೀಡಿ ಕಂದಾಯ ದಾಖಲೆಗಳ ಸ್ಕ್ಯಾನಿಂಗ್ ಕಾರ್ಯ ವೀಕ್ಷಿಸಿದರು.ಕಾಳಗಿ ಗ್ರೇಡ್-1 ತಹಶೀಲ್ದಾರ ಪೃಥ್ವಿರಾಜ ಪಾಟೀಲ, ತಾಲೂಕಾ ಪಂಚಾಯತ್ ಇ.ಓ ಬಸಲಿಂಗಪ್ಪ ಡಿಗ್ಗಿ, ನಬಾರ್ಡ್ ಅಧಿಕಾರಿ ಲೋಹಿತ್ ಸೇರಿದಂತೆ ಇತರೆ ತಾಲೂಕಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.



# ಕ್ಷಯಮುಕ್ತ ಕರ್ನಾಟಕಕ್ಕೆ ಎಲ್ಲರ ಸಹಕಾರ ಅಗತ್ಯ



ಕಲಬುರಗಿ:ನ.19:ಎರಡು ವಾರ ಅಥವಾ ಹೆಚ್ಚಿನ ಅವಧಿಯ ಕೆಮ್ಮು, ಕಫದ ಜೊತೆಗೆ ರಕ್ತ ಕಾಣಿಸುವುದು, ವಿಶೇಷವಾಗಿ ರಾತ್ರಿ ವೇಳೆಯಲ್ಲಿ ಜ್ವರ ಬರುವುದು, ತೂಕದ ಇಳಿಕೆ, ರಾತ್ರಿ ವೇಳೆ ಬೆವರುವುದು, ಹಸಿವಾಗದಿರುವುದು ಕ್ಷಯ ರೋಗದ ಲಕ್ಷಣಗಳಾಗಿವೆ. ಆಗ ಇದರ ಬ್ಗಗೆ ನಿರ್ಲಕ್ಷ್ಯ ಮಾಡದೆ ತಕ್ಷಣವೇ ಟಿ.ಬಿ ಕಾಯಿಲೆಯ ಪರೀಕ್ಷೆ ಮಾಡಿಸಿಕೊಂಡು, ಅದಕ್ಕೆ ಸೂಕ್ತ ಚಿಕಿತ್ಸೆ ಪಡೆಯಬೇಕು. ಕ್ಷಯ ಮುಕ್ತ ಕರ್ನಾಟಕ ಆಂದೋಲನಕ್ಕೆ ಎಲ್ಲರ ಸಹಕಾರ ಅಗತ್ಯವಾಗಿದೆ ಎಂದು ವೈದ್ಯಾಧಿಕಾರಿ ಡಾ.ಅನುಪಮಾ ಎಸ್.ಕೇಶ್ವಾರ ಹೇಳಿದರು.

ಜಿಲ್ಲಾಡಳಿತ,,ಜಿಲ್ಲಾ ಪಂಚಾಯತ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಕ್ಷಯರೋಗ ನಿರ್ಮೂಲನಾ ಕಾರ್ಯಕ್ರಮ ಕಾರ್ಯಾಲಯ ಮತ್ತು 'ಬಸವೇಶ್ವರ ಸಮಾಜ ಸೇವಾ ಬಳಗ'ದ ಇವುಗಳ ಸಹಯೋಗದೊಂದಿಗೆ ನಗರದ ಶೇಖರೋಜಾದಲ್ಲಿನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜರುಗಿದ 'ಸಕ್ರಿಯ ಕ್ಷಯ ರೋಗ ಪತ್ತೆ ಆಂದೋಲನ''ದಲ್ಲಿ ಅವರು ಮಾತನಾಡುತ್ತಿದ್ದರು.

ಕ್ಷಯ ಸಂಪೂರ್ಣವಾಗಿ ಗುಣಮುಖವಾಗುವಂತಹ ರೋಗವಾಗಿದೆ. ಇದು ರೋಗಿಯು ಸೀನಿದಾಗ ಮತ್ತು ಕೆಮ್ಮಿದಾಗ ಗಾಳಿಯ ಮೂಲಕ ಹರಡುತ್ತದೆ. ಮುಟ್ಟುವುದರಿಂದ, ಕೈ ಕುಲುಕುವುದರಿಂದ ಬರುವುದಿಲ್ಲ. ಕ್ಷಯ ರೋಗದ ಪರೀಕ್ಷೆ ಮತ್ತು ಚಿಕಿತ್ಸೆ ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿದೆ. ಇದರ ಬಗ್ಗೆ ಜನಸಾಮಾನ್ಯರಿಗೆ ಅರಿವು ಮೂಡಿಸಬೇಕು. ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಕೊಳ್ಳಿ. ಹಸಿರು ತರಕಾರಿ, ಹಾಲು, ಹಣ್ಣು,ಮೊಟ್ಟೆ, ಮೀನು ಸೇವನೆ ಮಾಡಬೇಕು. ಎಣ್ಣೆಯಲ್ಲಿ ಬೇಯಿಸಿದ, ಕರಿದ ಆಹಾರಗಳ ಸೇವನೆ ಬೇಡ.

ಕ್ಷಯರೋಗದಿಂದ ಚೇತರಿಸಿಕೊಂಡಿದ್ದರೆ ಮತ್ತೊಮ್ಮೆ ಕ್ಷಯರೋಗ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಬಳಗದ ಅಧ್ಯಕ್ಷ ಎಚ್.ಬಿ. ಪಾಟೀಲ, ಸಮಾಜ ಸೇವಕ ಶಿವಯೋಗೆಪ್ಪಾ ಎಸ್.ಬಿರಾದಾರ, ಆರೋಗ್ಯ ಕೇಂದ್ರದ ಸಿಬ್ಬಂದಿಗಳಾದ ಜಗನಾಥ ಗುತ್ತೇದಾರ, ಗುರುರಾಜ ಕೈನೂರ್, ನಾಗೇಶ್ವರಿ ಮುಗಳಿವಾಡಿ, ಮಂಗಲಾ ಚಂದಾಪುರೆ, ಶ್ರೀದೇವಿ, ಸಂಗಮ್ಮ ಅತನೂರ, ರೇಷ್ಮಾ ನಕ್ಕುಂದಿ, ಗಂಗಾಜ್ಯೋತಿ ಗಂಜಿ, ಚಂದಮ್ಮ ಮರಠಾ, ಅರ್ಚನಾ ಸಿಂಗೆ, ಚಂದ್ರಕಲಾ, ಲಕ್ಷ್ಮೀ ವೈಲಾರಿ, ಆಶಾ ಕಾರ್ಯಕರ್ತೆಯರಾದ ಸಂಗೀತಾ, ಗೌರಮ್ಮ, ನೀತಾ, ಲಕ್ಷ್ಮೀ, ಸುಲೋಚನಾ, ಸಂಗೀತಾ ಡಿ., ಸೇವಕರಾದ ನಾಗಮ್ಮ ಚಿಂಚೋಳಿ, ಸಿದ್ರಾಮ್ ಸೇರಿದಂತೆ ಮುಂತಾದವರಿದ್ದರು.

# ಸಂಘ ಸಂಸ್ಥೆಗಳು ಸಮಾಜ ಮುಖಿ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು:ಮುಲಗೆ

ಕಲಬುರಗಿ,ನ.19:ಕೌಶಲ್ಯ ಸೇವಾ ಟ್ರಸ್ಟ್‌ನ ವಾರ್ಷಿಕೋತ್ಸವ ಹಾಗೂ ಮಕ್ಕಳ ದಿನಾಚರಣೆ ಮತ್ತು ಕೌಶಲ್ಯ ಸೇವಾ ರತ್ನ ಪ್ರಶಸ್ತಿ ಸಮಾಂಭವನ್ನು ಇಂದು ಜಯನಗರದಲ್ಲಿ ಶಿವಮಂದಿರದಲ್ಲಿ ಜರುಗಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು ಸಂಘ ಸಂಸ್ಥೆಗಳು ನಿಸ್ವಾರ್ಥದಿಂದ ಸಮಾಜ ಮುಖಿ ಕೆಲಸದಲ್ಲಿ ತೊಡಗಿಸಿಕೊಳ್ಳಬೇಕು.

ಕೌಶಲ್ಯ ಸೇವಾ ಎಲೆಮರೆ ಕಾಯಿಯಂತೆ ತನ್ನ ಸೇವೆಯನ್ನು ದಶಕಗಳಿಗಿಂತಲು ಹೆಚ್ಚು ಮಾಡುತ್ತ ಬಂದಿರುವುದು ಶ್ಲಾಘನೀಯ. ಕೌಶಲ್ಯ ಸೇವಾ ಟ್ರಸ್ಟ್ ಸಾಮಾಜಿಕ ಕಾರ್ಯಗಳನ್ನು ಮಾಡುವ ಮೂಲಕ ತನ್ನ ಸೇವಾ ಕಾರ್ಯ ನಿರಂತರವಾಗಿ ಮುಂದುವರೆಸುತ್ತಾ ಬಂದಿದೆ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹೋರಾಟಗಾರ ಹಾಗೂ ಜಯನಗರ ಶಿವಮಂದಿರ ಅಭಿವೃದ್ಧಿ ಟ್ರಸ್ಟ್ ಅಧ್ಯಕ್ಷ ಡಾ.ಲಿಂಗರಾಜ ಸಿರಗಾಪೂರ ಮಾತನಾಡಿ ಕೌಶಲ್ಯ ಸೇವಾ ಟ್ರಸ್ಟ್ ನಿರಂತರವಾಗಿ ಜನರ ಅನಕೂಲಕ್ಕಾಗಿ ಕಲ್ಯಾಣ ಕಾರ್ಯಗಳನ್ನು ಮಾಡುತ್ತ ಬಂದಿರುವುದು ಮಾದರಿಯಾಗಿದೆ ಎಂದು ಬಣ್ಣಿಸಿದರು. ಸುಭಾಷಚಂದ್ರ ಪಾಟೀಲ ಸ್ಮಾರಕ ಜನ ಕಲ್ಯಾಣ ಟ್ರಸ್ಟ್ ಅಧ್ಯಕ್ಷ ಶರಣಗೌಡ ಪಾಟೀಲ ಪಾಳಾ ಅವರು ಮಾತನಾಡಿ ಪರರ ಹಿತದವನ್ನೆ ಬಯಸುವ ಮನುಷ್ಯ ಮಹಾಪುರುಷನಾಗುತ್ತಾನೆ.

ಟ್ರಸ್ಟ್ ಅಧ್ಯಕ್ಷ ಅಶೋಕ ಕಮಲಾಪೂರ ಪರೋಪಕಾರಿ ಮನೋಭಾವದವರು.ಅವರ ಮಹತ್ವಕಾಂಕ್ಷೀಯ ಕೌಶಲ್ಯ ಸೇವಾ ಟ್ರಸ್ಟ್ ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.ಅಧ್ಯಕ್ಷತೆಯನ್ನು ಟ್ರಸ್ಟ್ ನ ಅಧ್ಯಕ್ಷ ಅಶೋಕ ಕಮಲಾಪುರ ಅವರು ವಹಿಸಿ ಮಾತನಾಡಿದರು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರಾದ ಗುರುಲಿಂಗಯ್ಯ ಬಸಯ್ಯ ಹಾಲ,ವೆ.ಮಲ್ಲಯ್ಯ ಹಿರೇಮಠ, ಬಸವರಾಜ ಆರ್.ಉಪ್ಪಿನ, ಸಂತೋಷ ಜಿ.ನಾಡಗೇರಿ, ವಿನಾಯಕ ಜೋಶಿ, ಕಾಶಮ್ಮ ಎನ್.ಚೌಕ್ಕೆಗೌಡ,ಕು.ಮಾಲಾ ದಣ್ಣೂರ,ಅಪ್ಪಾರಾವ ಮೋರೆ,ಸೂರ್ಯಕಾಂತ ಕೆ.ಬಿ, ಸುರೇಶ್ ಕುಲಕರ್ಣಿ,ಬಾಬಾ ಫಕ್ರುದ್ದೀನ್, ಪೀರಪ್ಪ ಹಾಗೂ ಮಹೇಂದ್ರಸಿಂಗ್ ಎಂ.ರಾಜಪೂತ ಅವರಿಗೆ ಕೌಶಲ್ಯ ಸೇವಾ ರತ್ನ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.ಶಿವರಾಜ್ ಆರ್.ಚಿದ್ರಿ ಮತ್ತು ವಿನೋದ ಎಸ್.ದೇಸಾಯಿ ಇವರನ್ನು ವಿಶೇಷ ಗೌರವ ಸನ್ಮಾನ ಮಾಡಲಾಯಿತು.

ಕುಮಾರಿ ರತ್ನಕುಮಾರಿ ಕಮಲಾಪೂರ ಸ್ವಾಗತಿಸಿದರು.ಬಸವರಾಜ ಕೆ.ಬಿ ನಿರೂಪಿಸಿದರು.ಶ್ರೀಶೈಲ ಕಮಲಾಪೂರ ವಂದಿಸಿದರು. ಬಸವರಾಜ ಮಾಗಿ,ಸಿದ್ಧಲಿಂಗ ಗುಬ್ಬಿ,ಮನೋಹರ ಬಡಶೇಷಿ, ಮಲ್ಲಯ್ಯಸ್ವಾಮಿ ಗಂಗಾಧರ ಮಠ,ವೀರಪ್ಪ ಹುಡುಗಿ,ಅನುರಾಧಾ ಕುಮಾರಸ್ವಾಮಿ, ಶೈಲಜಾ ವಾಲಿ,ಸುರೇಖಾ ಬಾಲಕೊಂದೆ,ಸುಷ್ಮಾ ಮಾಗಿ ,ಗೀತಾ ಸಿರಗಾಪೂರ,ಕೌಶಲ್ಯ ಕಮಲಾಪೂರ,ಸುಶಿಲಾ ಬೊಮ್ಮಣ್ಣ ಸೇರಿದಂತೆ ಅನೇಕರು ಇದ್ದರು.



D.Amosh.R Cell: 9663949603
ಆರ್.ಪಿ. ಪ್ರಿಂಟಿಂಗ್ ಪ್ರೆಸ್
RP Printing Press
MULTI COLOUR | OFFSET | SCREEN & ALL TYPES OF PRINTING
Kamshetty Complex, Udgir Road, Bidar

Cell: 9886970762 8867199064
Max Power
MOBILE CENTER
A complete Accessories Service Point
All Mobile Sales & repairing
Kamshetty Complex, Opp: Gurudwara Gate, Bidar

Jai Bhavani Prasanna
Cell: 9164044426 9019122161
Srikanth A/c
Hair Saloon
With Mens Parlour
Kamshetty Complex, Opp: Gurudwara Gate, Bidar

# 4.5ಕೋಟಿ ರೂ. ರಸ್ತೆ ಕಾಮಗಾರಿಗೆ ಶಾಸಕ ಡಾ. ಜಾಧವ್ ಚಾಲನೆ



ಕಾಳಗಿ:ನ.19:ತಾಲೂಕಿನ ಕೊಡದೂರ, ಸಾಲಹಳ್ಳಿ ಮಾರ್ಗದಿಂದ ಡೊಣ್ಣೂರ ಗ್ರಾಮದವರೆಗೆ ಕೆ.ಆರ್.ಐ.ಡಿ.ಎಲ್ ಯೋಜನೆ ಅಡಿಯಲ್ಲಿ 3.5ಕೋಟಿ ರೂ. ಅನುದಾನದಲ್ಲಿ 3.5ಕಿ.ಮೀ ಡಾಂಬರಿಕರಣ ರಸ್ತೆ ಹಾಗೂ ಕೊಡದೂರ ಗ್ರಾಮದಲ್ಲಿ ಒಂದು ಕೋಟಿ ರೂ. ಅನುದಾನದಲ್ಲಿ ಸಿಸಿ ರಸ್ತೆ ನಿಮಾರ್ಣ ಕಾಮಗಾರಿಗೆ ಶಾಸಕ ಡಾ ಅವಿನಾಶ್ ಜಾಧವ್ ಗುದ್ದಲಿ ಪೂಜೆ ನೆರವೇರಿಸುವ ಮೂಲಕ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ರೈತರ ಅನುಕೂಲಕ್ಕಾಗಿಯೇ ಕೊಡದೂರ, ಸಾಲಹಳ್ಳಿ ಮಾರ್ಗದಿಂದ ಡೊಣ್ಣೂರ ವರೆಗಿನ ಈ ರಸ್ತೆ ನಿರ್ಮಾಣ ಮಾಡಲಾಗುತ್ತಿದ್ದೆ. ಎಲ್ಲಾ ರೈತರು ಇದರ ಸದುಪಯೋಗ ಪಡೆದುಕೊಂಡು ಒಗ್ಗಟ್ಟಾಗಿ ಗುಣಮಟ್ಟದ ರಸ್ತೆ ನಿರ್ಮಾಣ ಮಾಡಲು ಸಹಕಾರ ನೀಡಬೇಕು ಎಂದು ಹೇಳಿದರು. ಇದೇ ವೇಳೆ ಸಾರ್ವಜನಿಕರು ಸಾಲಹಳ್ಳಿ ಗ್ರಾಮದಲ್ಲಿ ಬಸ್ ನಿಲ್ದಾಣ ನಿರ್ಮಾಣ ಮಾಡುವಂತೆ ಮನವಿ ಮಾಡಿದರು ಇದಕ್ಕೆ ಸಕಾರಾತ್ಮಕವಾಗಿ ಸ್ಪಂದಿಸಿ ಶಾಸಕ ಡಾ. ಜಾಧವ್ ಆದಷ್ಟು ಬೇಗನೆ ಬಸ್ ನಿಲ್ದಾಣ ನಿರ್ಮಾಣ ಮಾಡುವುದಾಗಿ ಭರವಸೆ ನೀಡಿದರು.

ಕೋಲಿ ಸಮಾಜದ ಜಿಲ್ಲಾಧ್ಯಕ್ಷ ರವಿರಾಜ ಕೊರವಿ ಮಾತನಾಡಿ, ಅಭಿವೃದ್ಧಿಗೆ ಅನುದಾನದ ಕೊರತೆಯಿರುವ ಕಾಂಗ್ರೆಸ್ ಸರ್ಕಾರದಲ್ಲಿ ಶಾಸಕ ಡಾ. ಅವಿನಾಶ್ ಜಾಧವ್ ಸುಮಾರು ರೈತರ ಅನುಕೂಲಕ್ಕಾಗಿ ರಸ್ತೆ ನಿರ್ಮಾಣ ಮಾಡುತ್ತಿರುವುದು ಶ್ಲಾಘನೀಯವಾಗಿದೆ ಎಂದು ಹೇಳಿದರು.

ಮುಖಂಡರಾದ ವಿಜಯಕುಮಾರ್ ಚೆಂಗಟಿ, ರಮೇಶ್ ಕಿಟ್ಟದ, ಶರಣು ಚಂದಾ, ಪ್ರಶಾಂತ ಕದಮ, ಜಗನ್ನಾಥ ತೇಲಿ, ಪುರುಷೋತ್ತಮ ಗುತ್ತೇದಾರ, ಮಹೇಂದ್ರ ಭೆಡಸೂರ, ಅಂಬರೀಶ್ ಸಾಲಹಳ್ಳಿ, ಅಮೃತರಾವ ನಾಗೂರ, ಆನಂದ ಮಂಗೊಂಡ, ರಮೇಶ್ ಕುಲಕರ್ಣಿ, ಶರಣು ಸಜ್ಜನ, ಅಯ್ಯಣ್ಣ ಕುಂಬಾರ, ನಾಗೇಂದ್ರ ಚಿಂದಿ, ಶುಶೀಲಕುಮಾರ ಖಾಜಾಪೂರ, ನಾಗೇಂದ್ರಪ್ಪ ತಾಂಡೂರ ಸೇರಿದಂತೆ ಅನೇಕರು ಇದ್ದರು.

# ಪ್ರಕೃತಿ ಚಿಕಿತ್ಸೆ ಸಮಗ್ರ ಆರೋಗ್ಯ ಪದ್ಧತಿ

ಕಲಬುರಗಿ.ನ.19:ಪ್ರಕೃತಿ ಚಿಕಿತ್ಸೆಯು ದೇಹ, ಮನಸ್ಸು ಮತ್ತು ಆತ್ಮದ ಸಮಗ್ರ ಏಕತೆಯನ್ನು ಪರಿಗಣಿಸುತ್ತದೆ. ಇದು ವ್ಯಕ್ತಿಯ ಜೀವನಶೈಲಿ, ಆಹಾರ ಮತ್ತು ಭಾವನಾತ್ಮಕ ಆರೋಗ್ಯವನ್ನು ಗಮನದಲ್ಲಿರಿಸುತ್ತದೆ.

ನೈಸರ್ಗಿಕ ವಿಧಾನಗಳನ್ನು ಬಳಸಿಕೊಂಡು ದೇಹದ ಸ್ವ-ಗುಣಪಡಿಸುವ ಶಕ್ತಿಯನ್ನು ಸಕ್ರಿಯಗೊಳಿಸುವ ಒಂದು ಪೂರಕ ಚಿಕಿತ್ಸಾ ಪದ್ಧತಿ ಇದಾಗಿದ್ದು, ಯಾವುದೇ ಅಡ್ಡ ಪರಿಣಾಮಗಳು ಇಲ್ಲದ ಚಿಕಿತ್ಸಾ ವಿಧಾನ ಇದಾಗಿದೆ ಎಂದು ಉಜಿರೆಯ ಧರ್ಮಸ್ಥಳದ ಶ್ರೀ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಆಸ್ಪತ್ರೆಯ ವೈದ್ಯೆ ಡಾ.ಶ್ರೀನಿಧಿ ಬೀದರ ಹೇಳಿದರು.

ನಗರದ ಆಳಂದ ರಸ್ತೆಯ ಖಾದ್ರಿ ಚೌಕ್ ನಲ್ಲಿರುವ 'ಸಕ್ಸಸ್ ಕಂಪ್ಯೂಟರ್ ತರಬೇತಿ ಕೇಂದ್ರ'ದಲ್ಲಿ 'ಧರ್ಮಸ್ಥಳ ಶ್ರೀ ಮಂಜುನಾಥೇಶ್ವರ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಆಸ್ಪತ್ರೆ' ಮತ್ತು 'ಬಸವೇಶ್ವರ ಸಮಾಜ ಸೇವಾ ಬಳಗ' ಇವರ ಸಂಯುಕ್ತ ಆಶ್ರಯದಲ್ಲಿ ಮಂಗಳವಾರ ಬೆಳಿಗ್ಗೆ ಏರ್ಪಡಿಸಿದ್ದ "8ನೇ ರಾಷ್ಟ್ರೀಯ ಪ್ರಕೃತಿ ಚಿಕಿತ್ಸೆ ದಿನಾಚರಣೆ"ಯನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ದಿನಕ್ಕೆ ಎರಡು ಬಾರಿ ಮಾತ್ರ ಊಟ ಮಾಡುವುದು,

ಆಗಾಗ್ಗೆ ಸ್ವಲ್ಪ-ಸ್ವಲ್ಪ ನೀರು ಕುಡಿಯುವುದು, ವಾರದಲ್ಲಿ ಒಂದು ದಿನ ಉಪವಾಸ ಮಾಡುವುದು, ನಿಯಮಿತವಾಗಿ ವ್ಯಾಯಾಮ, ಯೋಗ, ಧ್ಯಾನ ಹಾಗೂ ದಿನಕ್ಕೆ ಎರಡು ಬಾರಿ ಪ್ರಾರ್ಥನೆ ಮಾಡುವ ಪಂಚತತ್ವ ಪಾಲನೆಯಿಂದ ಸದಾ ಆರೋಗ್ಯವಾಗಿರಲು ಸಾಧ್ಯವಿದೆ ಎಂದರು. ಆಸ್ಪತ್ರೆಯ ಮತ್ತೋರ್ವ ಪ್ರಕೃತಿ ಚಿಕಿತ್ಸೆ ವೈದ್ಯೆ ಡಾ. ಅಶ್ವಿನಿ ಅಲ್ಲಾಪುರ ಮಾತನಾಡಿ, ಪ್ರಕೃತಿ ಚಿಕಿತ್ಸೆಯು ರೋಗದ ಮೂಲ ಕಾರಣವನ್ನು ಗುರುತಿಸಿ, ಸಂಪೂರ್ಣ ವ್ಯಕ್ತಿಗೆ ಚಿಕಿತ್ಸೆ ನೀಡುವ ಮತ್ತು ರೋಗ ತಡೆಯುವ ಗುರಿಯನ್ನು ಹೊಂದಿದೆ.

ಪ್ರಕೃತಿ ಚಿಕಿತ್ಸೆಯು ಶಸ್ತ್ರಚಿಕಿತ್ಸೆ ಮತ್ತು ಔಷಧಿಗಳ ಕಡಿಮೆ ಬಳಕೆಯನ್ನು ಪ್ರತಿಪಾದಿಸುತ್ತದೆ. ಋತುಮಾನದ ಹಣ್ಣುಗಳು, ತರಕಾರಿಗಳು ಮತ್ತು ನೈಸರ್ಗಿಕ ಆಹಾರಗಳ ಸೇವನೆ ಮಾಡಬೇಕು.

ಉಪವಾಸ ಮಾಡುವುದರಿಂದ ದೇಹದಲ್ಲಿನ ವಿಷವನ್ನು ಹೊರಹಾಕಲು ಸಾಧ್ಯವಾಗುತ್ತದೆ. ಜಲಚಿಕಿತ್ಸೆ, ಮಣ್ಣಿನ ಚಿಕಿತ್ಸೆ, ದೇಹದ

ಮಸಾಜ್ ಸೇರಿದಂತೆ ವಿವಿಧ ಪ್ರಕೃತಿ ಚಿಕಿತ್ಸೆಗಳ ಮೂಲಕ ಕಾಯಿಲೆಗಳನ್ನು ಗುಣಪಡಿಸಲಾಗುತ್ತದೆ ಎಂದರು. ಬಳಗದ ಅಧ್ಯಕ್ಷ ಎಚ್.ಬಿ.ಪಾಟೀಲ್ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ.ರಾಜಶೇಖರ ಪಾಟೀಲ್, ಶಿವಯೋಗೆಪ್ಪಾ ಎಸ್. ಬಿರಾದಾರ, ಪೂಜಾ ಹೂಗಾರ, ಕಾವೇರಿ ಹೌದೆ, ಸ್ನೇಹಾ ಚೌಹಾಣ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.



# ಕನ್ನಡ ನಾಡು-ನುಡಿಯ ಪುನರಜ್ಜೀವನಕ್ಕೆ ಬಿ.ಎಂ.ಶ್ರೀ ಕೊಡುಗೆ ಅವಿಸ್ಮರಣೀಯ



ಕಲಬುರಗಿ:ನ.19: ನವೋದಯ ಕನ್ನಡ ಸಾಹಿತ್ಯದ ಆಚಾರ್ಯ ಪುರುಷ ಬಿ.ಎಂ.ಶ್ರೀಕಂಠಯ್ಯನವರು ಪ್ರತಿಭಾವಂತ ಅಧ್ಯಾಪಕರು, ಸಾಹಿತಿಗಳು, ವಿದ್ವಾಂಸರು, ಅನುವಾದಕರು, ಉತ್ತಮ ಆಡಳಿತಾಧಿಕಾರಿಗಳು, ಕನ್ನಡ ನಾಡಿನ ಚರಿತ್ರೆಯಲ್ಲಿ ಸ್ಮರಣೀಯರು. ಕನ್ನಡ ಸಾಹಿತ್ಯದಲ್ಲಿ ಜನತೆಯ ಆಸಕ್ತಿಯನ್ನು ಮೂಡಿಸುವಲ್ಲಿ ಶ್ರಮಿಸಿದವರಲ್ಲಿ ಪ್ರಮುಖರು. ಕನ್ನಡ ಸಾಹಿತ್ಯವನ್ನು ಜನರ ಬಳಿಗೆ ತೆರಳಿ ಮುಟ್ಟಿಸುವಲ್ಲಿ ಪಾತ್ರ ವಹಿಸಿದ್ದಾರೆ. ಕನ್ನಡ ಸಾಹಿತ್ಯ, ನಾಡು-ನುಡಿಯ ಪುನರಜ್ಜೀವನಕ್ಕೆ ಬಿ.ಎಂ.ಶ್ರೀ ಅವರ ಕೊಡುಗೆ ಅವಿಸ್ಮರಣೀಯವಾಗಿದೆ ಎಂದು ಉಪನ್ಯಾಸಕ, ಲೇಖಕ ಎಚ್.ಬಿ.ಪಾಟೀಲ ಅಭಿಪ್ರಾಯಪಟ್ಟರು.ನಗರದ ಆಳಂದ ರಸ್ತೆಯ ಸಂತೋಷ ಕಾಲನಿಯ ಕ್ರಾಸ್ ಸಮೀಪದ 'ರಿಪಬ್ಲಿಕ್ ಸ್ಪೋಕನ್ ಇಂಗ್ಲೀಷ್ ಅಕಾಡೆಮಿ'ಯಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗುತ್ತಿರುವ ರಾಜ್ಯೋತ್ಸವ ಮಾಸಾಚರಣೆಯ ಸರಣಿ ಉಪನ್ಯಾಸ-16ರಲ್ಲಿ 'ಕನ್ನಡ ನಾಡು-ನುಡಿಗೆ ಬಿ.ಎಂ. ಶ್ರೀಕಂಠಯ್ಯನವರ ಕೊಡುಗೆ' ವಿಶೇಷ ಉಪನ್ಯಾಸ ಕಾರ್ಯ ಕ್ರಮದಲ್ಲಿ ಅವರು ಮಾತನಾಡುತ್ತಿದ್ದರು. ಬಿ.ಎಂ.ಶ್ರೀರಚಿಸಿದ'ಇಂಗ್ಲೀಷ್ ಗೀತೆಗಳು' ಎಂಬ ಗ್ರಂಥದ ಮೂಲಕ ಇಂಗ್ಲೀಷ್ ಭಾಷೆಯಲ್ಲಿರುವ ಅನೇಕ ಅಂಶಗಳನ್ನು ಕನ್ನಡಕ್ಕೆ ತರುವ ಮೂಲಕ, ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ. 'ಬಿ.ಎಂ. ಶ್ರೀಯವರ ಕೃತಿಗಳು ಗಾತ್ರದಲ್ಲಿ ಚಿಕ್ಕವಾದರೂ ತೂಕದಲ್ಲಿ ದೊಡ್ಡವು'.ಹೊಸಗನ್ನಡದ ಕವಿತೆಯ ಕಣ್ಣು ತೆರೆಯುವಂತೆ ಮಾಡಿದವರು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿ, ಮಹಿಳಾ ಶಾಖೆಯ ಆರಂಭ, ಕನ್ನಡ ಬಾವುಟ ಪ್ರಕಟಣೆ, ಕನ್ನಡ ಅಣುಗ,ಕನ್ನಡ ಕಾವ-ಜಾಣ ಪರೀಕ್ಷೆಗಳ ಪ್ರಾರಂಭಿಸಿ ಕನ್ನಡ ಸಾಹಿತ್ಯವನ್ನು ಶಾಲಾ-ಕಾಲೇಜುಗಳಲ್ಲಿ ಓದಲಾರದವರಿಗೆ ಓದುವಂತೆ ಮಾಡಿದ ಕೀರ್ತಿ ಬಿ.ಎಂ.ಶ್ರೀ ಅವರಿಗೆ ಸಲ್ಲುತ್ತದೆ. 'ರಾಜಸೇವಾಸಕ್ತ' ಬಿರುದಾಂಕಿತ ಶ್ರೀಯುತರು, ಇಂಥ ಮೇರು ವ್ಯಕ್ತಿ ಕಲಬುರಗಿಯಲ್ಲಿ 1928ರಲ್ಲಿ ಜರುಗಿದ 14ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು ಎಂಬುದು ನಮ್ಮ ಜಿಲ್ಲೆಯ ಜನತೆಗೆ ಹೆಮ್ಮೆಯ ವಿಷಯವಾ ಗಿದೆ ಎಂದರು. ಕಾರ್ಯಕ್ರಮ ದಲ್ಲಿ ಸಂಸ್ಥೆಯ ಅಧ್ಯಕ್ಷ ದತ್ತು ಹಡಪದ, ಕಸಾಪ ಉತ್ತರ ವಲಯದ ಗೌರವ ಅಧ್ಯಕ್ಷ ಶಿವಯೋಗೆಪ್ಪಾ ಎಸ್.ಬಿರಾ ದಾರ ಹಾಗೂ ವಿದ್ಯಾರ್ಥಿಗಳಿದ್ದರು.

# ಪ್ರತಿಭಾ ಕಾರಂಜಿ: ಅತಿ ಹೆಚ್ಚು ಬಹುಮಾನ ಗಳಿಸಿದ ವಿವಿಎನ್ ಶಾಲೆ

ಕಲಬುರಗಿ:ನ.19:ನಗರದ ಜೇವರ್ಗಿ ಕಾಲೋನಿ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿಯ ವಿವಿಧ ಸ್ಪರ್ಧೆಗಳಲ್ಲಿ ಕರುಣೇಶ್ವರ ನಗರದಲ್ಲಿರುವ ವಿವೇಕಾನಂದ ವಿದ್ಯಾ ನಿಕೇತನ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಭಾಗವಹಿಸಿಅತಿ ಹೆಚ್ಚು ಬಹುಮಾನ ಗಳಿಸಿ 29 ವಿದ್ಯಾರ್ಥಿಗಳು ತಾಲೂಕು ಮಟ್ಟದ ಪ್ರತಿಭಾ ಕಾರಂಜಿಗೆ ಆಯ್ಕೆಯಾಗಿದ್ದಾರೆ. ವಿಜೇತರಿಗೆ ಕ್ಲಸ್ಟರ್ ಸಿ.ಆರ್.ಪಿ.ಮಲಿಕ್ ಸಾಬ್ ನಧಾಫ್ ಪ್ರಮಾಣ ಪತ್ರ ವಿತರಿಸಿ ಮಾತನಾಡಿದರು. ಮಕ್ಕಳ ಸರ್ವೋತೋಮುಖ ಅಭಿವೃದ್ಧಿಗೆ ಇಂತಹ ವೇದಿಕೆಗಳು ಅಗತ್ಯ. ಶಿಕ್ಷಕರು ಮಕ್ಕಳಲ್ಲಡಗಿರುವ ಪ್ರತಿಭೆ ಗುರುತಿಸಿ ಬೆಳೆಸಬೇಕು ಎಂದರು.ಕಿರಿಯ ಪ್ರಾಥಮಿಕ ವಿಭಾಗ:ಪ್ರಥಮ ಸ್ಥಾನ : ಕಂಠಪಾಠ ಇಂಗ್ಲೀಷ್ -ಆರಾಧ್ಯ ಸಂತೋಷ,ಅಭಿನಯ ಗೀತೆ-ಆರುಷಿ ಸುರೇಶ, ಛದ್ಮ ವೇಷ-ಋಷಿಕೇಶ ಮಲ್ಲಿಕಾ ರ್ಜುನ, ಚಿತ್ರಕಲೆ-ಓಂಕಾರ ರೆಡ್ಡಿ ಸತೀಶ ರೆಡ್ಡಿ, ಭಕ್ತಿಗೀತೆ-ಅನ್ವಿತಾ ಕರುಣೆಶ

ದ್ವಿತೀಯ ಸ್ಥಾನ: ಆಶು ಭಾಷಣ-ಶ್ರೇಯಾ ಸಿದ್ದಪ್ಪ ತೃತೀಯ ಸ್ಥಾನ:ಕಥೆ ಹೇಳುವುದು-ತನುಶ್ರೀ ದೇವೇಂದ್ರಕುಮಾರ ಹಿರಿಯ ಪ್ರಾಥಮಿಕ ವಿಭಾಗ : ಪ್ರಥಮ ಸ್ಥಾನ:ಕಂಠಪಾಠ ಇಂಗ್ಲೀಷ-ವೈಷ್ಣವಿ ಗುರುರಾಜ ,ದೇಶ ಭಕ್ತಿ ಗೀತೆ- ಪ್ರಜ್ಞಾ ರವೀಂದ್ರ, ಕಥೆ ಹೇಳುವುದು-ಆರಾಧ್ಯ ಸುರೇಶ, ಭಕ್ತಿ ಗೀತೆ-ಅನನ್ಯ ರಾಘವೇಂದ್ರ, ಕವನ ವಚನ-ವೈಷ್ಣವಿ ಸಿದ್ದಲಿಂಗ

ಪ್ರೌಢ ಶಾಲೆ ವಿಭಾಗ :ಪ್ರಥಮ ಸ್ಥಾನ:ಭಾಷಣ ಕನ್ನಡ-ಸಿಂಚನಾ ರಾಘವೇಂದ್ರ, ಜಾನಪದ ಗೀತೆ-ಸುರಭಿ ಸುಧೀರ, ಭರತನಾಟ್ಯ-ವನ್ಯ ಶಿವರಾಜ, ಚಿತ್ರಕಲೆ-ರಕ್ಷಿತಾ ಆನಂದ, ಚರ್ಚಾ ಸ್ಪರ್ಧೆ-ಕಾವ್ಯ ಅಜೀತಕುಮಾರ, ರಂಗೋಲಿ- ಬಿಂದುಶ್ರೀ ರೇವಣಸಿದ್ದಯ್ಯ, ಗಝುಲ್-ಪ್ರೇರಣಾ ರುದ್ರಪ್ಪ, ಆಶು ಭಾಷಣ-ಲಕ್ಷ್ಮೀ ಕಲ್ಲಪ್ಪ, ಖವ್ವಾಲಿ-ಶಾಂತನು ಹಾಗೂ ತಂಡ, ಜಾನಪದ ನೃತ್ಯ-ಅನುಷ್ಕಾ ಮತ್ತು ತಂಡ

ದ್ವಿತೀಯ ಸ್ಥಾನ:, ಭಾಷಣ ಹಿಂದಿ-ಕಾರ್ತಿಕ ವೆಂಕಟೇಶ, ಭಾವಗೀತೆ-ಪ್ರೇರಣಾ ರುದ್ರಪ್ಪ, ಪ್ರಬಂಧ ರಚನೆ-ದಾನೇಶ್ವರಿ ಸಿದ್ದಪ್ಪ, ಚರ್ಚಾ ಸ್ಪರ್ಧೆ-ಕಾವ್ಯ ಅಜೀತಕುಮಾರ ತೃತೀಯ ಸ್ಥಾನ: ಧಾರ್ಮಿಕ ಪಠಣ-ಬದ್ರಿನಾಥ ಓಂಕಾರ,ಭಾಷಣ ಇಂಗ್ಲೀಷ್ -ನಂದಿತಾ ರಾಜೀವ, ಕವನ ವಾಚನ- ಸುದೇಷ್ಣಾ ಓಂಕಾರ, ರಸ ಪ್ರಶ್ನೆ-ಕಿರಣ ಕಂಟೆಪ್ಪ ಹಾಗೂ ಗುರುರಾಜ ಕಲ್ಲಪ್ಪ ವಿದ್ಯಾರ್ಥಿಗಳಿಗೆ ಶಾಲೆಯ ಸಂಗೀತ ಶಿಕ್ಷಕರಾದ ಸವಿತಾ ಕುಲಕರ್ಣಿ, ಶ್ರುತಿ ಕುಲಕರ್ಣಿ, ಚಿತ್ರಕಲಾ ಶಿಕ್ಷಕಿ ಸುಖದೇವಿ ಕೋರಳ್ಳಿ, ನೃತ್ಯ ಶಿಕ್ಷಕ ಪ್ರೇಮಕುಮಾರ ಹಾಗೂ ಇತರ ವಿಷಯ ಶಿಕ್ಷಕರು ಮಾರ್ಗದರ್ಶನ ಮಾಡಿದ್ದರು. ಮಕ್ಕಳ ಈ ಸಾಧನೆಗೆ ಸಂಸ್ಥೆಯ ಅಧ್ಯಕ್ಷ ಸುವರ್ಣ ಭಗವತಿ, ಪ್ರಾಂಶುಪಾಲ ಸಿದ್ದಪ್ಪ ಭಗವತಿ,ಶಿಕ್ಷಕರು ಹಾಗೂ ಪೋಷಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.






Owner, Editor, Printerd,and published, :-Owner - sidramayya swamy devi colony bidar - 585401, Editor-sidramayya swamy devi colony bidar, Printed at Sri sai offset printer's H.NO : 8-9-416/1 devi colony bidar - 585401 Published at H.NO:8-9-416/1 devi colony Bidar - 585401